ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 34 ಆಗಸ್ಟ್ 24, 1980 ಬೆಲೆ : 50 ಪೈಸೆ

ಸರಕಾರಕ್ಕೆ ಎಚ್ಚರಿಕೆ

ಕಾರ್ಮಿಕ ವಿರೋಧಿ ಧೋರಣೆಗಳನ್ನು ಮತ್ತು "ಪೋಲೀಸ್ ರಾಜ್" ಧೋರಣೆಗಳನ್ನು ಅನುಸರಿಸುತ್ತಿರುವ ಕರ್ನಾಟಕ ರಾಜ್ಯದ ಕಾಂಗ್ರೆ ಸರಕಾರಕ್ಕೆ ರಾಜ್ಯದ ಕಾರ್ಮಿಕವರ್ಗವು ಎಚ್ಚರಿಕೆಯನ್ನಿತ್ತಿದೆ, ರಾಜ್ಯಸರಕಾರವು ಜಾರಿಗೆ ತರಲು ಯೋಚಿಸುತ್ತಿರುವ ಅಗತ್ಯಸೇವಾ ಮಸೂದೆ ಮತ್ತು ಮಾಲಕ-ಕಾರ್ಮಿಕ ವಿವಾದಗಳಲ್ಲಿ ಮಾಲಕರ ಪರವಾಗಿ ಪೋಲೀಸರು ಮಧ್ಯ ಪ್ರವೇಶಮಾಡಿ, ದಮನಕಾರಿ ನೀತಿಯನ್ನು ಅನುಸರಿಸುತ್ತಿರುವುದನ್ನು ಪ್ರತಿಭಟಿಸಲು ಕಾಂಗ್ರೆ ನಿಯಂತ್ರಿತ ಇಂಟಕ್‌ನ ಹೊರತು ಉಳಿದೆಲ್ಲಾ ಕಾರ್ಮಿಕ ಸಂಘಟನೆಗಳಿಂದ ಸೇರಿದ ಜಂಟೀ ಕ್ರಿಯಾಸಮಿತಿಯು ನೀಡಿದ ಕರೆಯ ಮೇರೆಗೆ ಆಗಸ್ಟ್ 18ರಂದು ನಡೆದ ಯಶಸ್ವಿ ಸಾರ್ವತ್ರಿಕ ಮುಷ್ಕರವನ್ನು ನೋಡಿಯಾದರೂ ಸರಕಾರವು ಈ ಕ್ರಮಗಳನ್ನು ಕೈಬಿಡಬೇಕು.

ಆಗಸ್ಟ್ 18ರಂದು ರಾಜ್ಯವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದ್ದರೂ ರಾಜ್ಯದ ರಾಜಧಾನಿಯೂ ಸೇರಿದಂತೆ ಹಲವಾರು ಪ್ರಮುಖ ಕೇಂದ್ರಗಳಲ್ಲೂ, ಜಿಲ್ಲೆಗಳಲ್ಲೂ ಸಂಪೂರ್ಣ ಬಂದ್ ನಡೆದುದು ಒಂದು ವಿಶೇಷ. ಸರಕಾರದ ಜನವಿರೋಧಿ ನೀತಿಗಳಿಂದ ಜನತೆಯು ಬೇಸತ್ತಿದೆ,

ಸಂಪಾದಕೀಯ

ಅತೃಪ್ತಿಯಿಂದ ಸಿಟ್ಟಿಗೆದ್ದಿದೆ ಎಂಬುದಕ್ಕೆ ಒಂದು ಉದಾಹರಣೆ ಬೆಲೆಏರಿಕೆ, ನಿರುದ್ಯೋಗ, ಭ್ರಷ್ಟಾಚಾರದಂತಹ ಸಮಸ್ಯೆಗಳು, ರಾಜ್ಯದಲ್ಲಿ ಹೆಚ್ಚುತ್ತಿರುವ ಪೋಲೀಸ್ ಹಿಂಸಾಚಾರ, ಇತ್ತೀಚೆಗೆ ರೈತಚಳುವಳಿ ಮತ್ತು ಬೆಲೆಏರಿಕೆ ಚಳುವಳಿ ನಡೆದಿರುವುದು ಮತ್ತು ಈ ಚಳುವಳಿಗಾರರ ಮೇಲೆ ಪೋಲೀಸ್ ದೌರ್ಜನ್ಯ-ಈ ಹಿನ್ನೆಲೆಯಲ್ಲಿ ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರದ ಕಡೆಗೆ ಹೊಸ ಆಯಾಮವೇ ದೊರೆತಿತ್ತು; ಅದರ ವ್ಯಾಪ್ತಿಯೂ ಹೆಚ್ಚಿತು. ನಿರೀಕ್ಷೆಗೆ ಮೀರಿ ಸಾರ್ವತ್ರಿಕ ಮುಷ್ಕರವು ಯಶಸ್ವಿಯಾಯಿತು

ರಾಷ್ಟ್ರದ ಹಲವಾರು ರಾಜ್ಯಗಳಲ್ಲಿ ಛಿದ್ರಕಾರಿ ಶಕ್ತಿಗಳು ಸಕ್ರಿಯವಾಗಿ ಜನರ ಗಮನವನ್ನು ಬೇರೆಡೆಗೊಯ್ಯುತ್ತಲಿರುವಾಗ ಕರ್ನಾಟಕದಲ್ಲಿ ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿ ಯುವಜನತೆ ಜನತೆಯ ಸಮಸ್ಯೆಗಳ ಬಗ್ಗೆ, ಸರಕಾರದ ಕಾರ್ಮಿಕ ಮತ್ತು ಜನತಾ ವಿರೋಧಿ ಧೋರಣೆಗಳ ವಿರುದ್ಧ ಹೋರಾಡುವುದು ಪ್ರಶಂಸನೀಯ. ರಾಜ್ಯದ ಹಿಂದಿನ ಚಳುವಳಿಗೂ ಈದಿನದ್ದಕ್ಕೂ ಇದೇ ವ್ಯತ್ಯಾಸ. ಸಂಘಟಿತ ಕಾರ್ಮಿಕ ವರ್ಗ ಹೋರಾಟದ ವ್ಯಾಪ್ತಿಯನ್ನು ಇನ್ನೂ ವಿಸ್ತರಿಸಿ ರಾಜ್ಯದ ಜನತೆಯ, ಹಳ್ಳಿಯ ಬಡವರ, ರೈತರ ಸಮಸ್ಯೆಗಳ ವಿರುದ್ಧ ಹೋರಾಡಲು ಮುಂದೆ ಬರಬೇಕಾಗಿದೆ. ಈಗಾಗಲೇ ಈ ದಿಕ್ಕಿನಲ್ಲಿ ಮುನ್ನಡೆಯಲಾಗುತ್ತಿದೆ. ರಾಜ್ಯದ ಎಡಶಕ್ತಿಗಳ ಐಕ್ಯತೆಯಿಂದ ಇದು ಇನ್ನೂ ಸುಲಭ ಸಾಧ್ಯವಾಗಬಲ್ಲುದು.

ಪೋಲೀಸ್ ದೌರ್ಜನ್ಯ ಕೊನೆಗೊಳ್ಳಲಿ

ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ನಿರಪರಾಧಿಗಳ ಮೇಲೆ, ಶ್ರಮಿಕವರ್ಗದ ಮೇಲೆ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿ ನಡೆಸುವ ಜನತೆಯ ಮೇಲೆ ಪೋಲೀಸ್ ದೌರ್ಜನ್ಯವು ನಿರಂತರವಾಗಿ ನಡೆದಿದೆ. ಬೇಲಿಯೇ ಹೊಲವನ್ನು ಮೇಯುವ ರೀತಿಯಲ್ಲಿ, ಜನತೆಗೆ ರಕ್ಷಣೆ ಈಯಬೇಕಾದಿದ್ದ ಪೋಲೀಸ್ ಇಲಾಖೆ ಜನತೆಯನ್ನು ಭಕ್ಷಣೆ ಮಾಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಬಂದ ವರದಿಗಳ ಪ್ರಕಾರವೇ ಅನೇಕ ನಿರಪರಾಧಿಗಳನ್ನು ಬಂಧಿಸಿ ಪೋಲೀಸರು ಅವರಿಗೆ ಚಿತ್ರಹಿಂಸೆ ಕೊಡುವುದು, ಅವರಿಂದ ಹಣ ಕೀಳುವುದು ಸರ್ವೇಸಾಮಾನ್ಯವಾಗಿದೆ. ಬೆಂಗಳೂರಿನಲ್ಲಿ ಪಂಕಜ್ ಪರೇಖ ಎಂಬ ಯುವಕನನ್ನು ಠಾಣೆಗೆ ಕರೆದೊಯ್ದು ಚಿತ್ರಹಿಂಸೆ ಕೊಟ್ಟದ್ದು, ರಘುನಾಥ ಎಂಬ ಯುವಕನನ್ನು ಮೂರುವರೆ ವರ್ಷಗಳ ಕಾಲ ಪೋಲೀಸರು ಚಿತ್ರಹಿಂಸೆಗೆ ಗುರಿಮಾಡಿದ್ದು, ಸ್ತ್ರೀಯೋರ್ವಳನ್ನು ಬಂಧಿಸಿ ತಲೆಬೋಳಿಸಿ ಚಿತ್ರಹಿಂಸೆ ಮತ್ತು ಅವಮಾನಕ್ಕೆ ಗುರಿಮಾಡಿದ್ದು, ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರದ ಸಂದರ್ಭ, ಕೆ. ಎಸ್. ರಾಮಕೃಷ್ಣ ಮತ್ತು ಮಿನರ್ವ ಮಿಲ್ಲಿನ ಸೆಲ್ವರಾಜ್ ಎಂಬುವರನ್ನು ಬಂಧಿಸಿ ಕೈಕಾಲು ಮುರಿಯುವಂತೆ ಹೊಡೆದಿರುವುದು, ತುರುವೇಕೆರೆಯಲ್ಲಿ ನರಸಮ್ಮ ಎಂಬ ಹೆಸರಿನ ಹರಿಜನ ಸೂಲಗಿತ್ತಿಯನ್ನು ಪೋಲೀಸರು ಬಂಧಿಸಿ ಹಿಂಸೆ ಇತ್ತುದು, ಸಾಗರದಲ್ಲಿ ಪೋಲೀಸ್ ಚಿತ್ರಹಿಂಸೆಯಿಂದ ರಾಮು ಎಂಬುವನು ಸತ್ತದ್ದು, ಶಿಕಾರಿಪುರದಲ್ಲಿ ನಿರಪರಾಧಿಯೋರ್ವನಿಗೆ ಹಿಂಸೆ ಮತ್ತು ಹಣ ಕೀಳಿದ್ದು-ಹೀಗೆ ಪತ್ರಿಕೆಗಳಲ್ಲಿ ಬಂದ ಹತ್ತಾರು ವರದಿಗಳಿದ್ದರೆ, ಬೆಳಕಿಗೆ ಬಾರದ ಘಟನೆಗಳು ನೂರಾರು, ಸಾವಿರಾರು.

ಶ್ರಮಜೀವಿ ಜನತೆ, ಕಾರ್ಮಿಕ ವರ್ಗ ಸಂಘಟಿತವಾಗಿ ಕಾನೂನಿನ ಚೌಕಟ್ಟಿನೊಳಗೆ ಹೋರಾಟ ನಡೆಸುತ್ತಿರುವಾಗ ಪೋಲೀಸರು ಮಾಲೀಕರ ಪರವಾಗಿ ಮಧ್ಯ ಪ್ರವೇಶಿಸಿ ನ್ಯಾಯವಾದ ಹೋರಾಟವನ್ನು ಹತ್ತಿಕ್ಕುವುದು, ದಿನನಿತ್ಯದ ಮಾತಾಗಿದೆ. ಬೆಂಗಳೂರಿನ ತಾಳಗುಣಿ ಕಾರ್ಮಿಕರ ಹೋರಾಟ, ಮೈಕೋ ಕಾರ್ಮಿಕರ ಹೋರಾಟ, ಐ. ಟಿ. ಸಿ. ಕಾರ್ಮಿಕರ ಹೋರಾಟ, ಮೆಟಲ್ ಲ್ಯಾಂಪ್ ಕ್ಯಾಪ್ ಕಾರ್ಮಿಕರ ಹೋರಾಟ, ಚಿಕ್ಕಮಗಳೂರು ಜಿಲ್ಲೆಯ ಸಂಸೆ ಟೀ ತೋಟ ಕಾರ್ಮಿಕರ ಹೋರಾಟ,

(ಕಡೇ ಪುಟ ನೋಡಿ)

ಕಾಂಗ್ರೆ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ

ರಾಜ್ಯದಾದ್ಯಂತ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ ಹಲವೆಡೆ ಬಂದ್

ಕರ್ನಾಟಕ ರಾಜ್ಯದ ಕಾಂಗ್ರೆ ಸರಕಾರವು ಜಾರಿಗೆ ತರಲು ಯೋಚಿಸುತ್ತಿರುವ ಅಗತ್ಯಸೇವಾ ಮಸೂದೆ ಮತ್ತು ಕಾರ್ಮಿಕರ ಮತ್ತು ಮಾಲಕರ ವಿವಾದದಲ್ಲಿ ಪೋಲೀಸರು ಮಾಲಕರ ಪರವಾಗಿ ಮಧ್ಯಪ್ರವೇಶಿಸುವುದನ್ನು ಪ್ರತಿಭಟಿಸುವುದಕ್ಕಾಗಿ ಆಗಸ್ಟ್ 18ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ರಚಿಸಲ್ಪಟ್ಟ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯು ಸಂಘಟಿಸಿದ ಜುಲೈ 14ರ ರಾಜ್ಯ ಸಮಾವೇಶವು ಕರೆ ನೀಡಿತ್ತು. ಆಗಸ್ಟ್ 18ರಂದು ಸಾರ್ವತ್ರಿಕ ಮುಷ್ಕರವು ಅಭೂತಪೂರ್ವ ಯಶಸ್ವಿಯಾಯಿತು ಮಾತ್ರವಲ್ಲ ರಾಜ್ಯದ ಹಲವಾರು ಪ್ರಮುಖ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು. ಕಾರ್ಮಿಕವರ್ಗದ ಕರೆಗೆ ಓಗೊಟ್ಟು ನಡೆದ ಯಶಸ್ವಿ ಸಾರ್ವತ್ರಿಕ ಮುಷ್ಕರ ಮತ್ತು ರಾಜಧಾನಿಯೂ ಸೇರಿದಂತೆ ಹಲವೆಡೆ ನಡೆದ ಬಂದ್ ಕಾರ್ಯಕ್ರಮವು ಚಾರಿತ್ರಿಕವಾಗಿದೆ; ಕರ್ನಾಟಕದ ಚರಿತ್ರೆಯಲ್ಲಿ ಮೊದಲನೆಯದಾಗಿದೆ. ರಾಜ್ಯವ್ಯಾಪಿಯಾಗಿ ನಡೆದ ಈ ಕಾರ್ಯಕ್ರಮವು ಶಾಂತಿಯುತವಾಗಿ ಜರುಗಿದುದು ಹೆಮ್ಮೆಪಡಬೇಕಾದ ಅಂಶ.

ಆಗಸ್ಟ್ 18ರಂದು ರಾಜ್ಯದ ರಾಜಧಾನಿ ಬೆಂಗಳೂರಲ್ಲಿ ಪೂರ್ಣ ಬಂದ್ ಆಗಿತ್ತು. ಕೇವಲ ಬೆರಳೆಣಿಕೆಯಷ್ಟು ಆಟೋರಿಕ್ಷಾಗಳು, ಪೋಲೀಸ್ ಸಿಬ್ಬಂದಿಯೊಂದಿಗೆ ಚಲಿಸುತ್ತಿದ್ದ ಕೇವಲ ಕೆಲವು ನಗರ ಸಾರಿಗೆ ಬಸ್ಸುಗಳು ಮತ್ತು ಕೆಲವು ಸಿನಿಮಾ ಮಂದಿರಗಳ ಹೊರತು ನಗರದ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆ ಸಂಪೂರ್ಣ ಸ್ತಬ್ಧಗೊಂಡಿತ್ತು. ಆಗಸ್ಟ್ 17ರಂದೇ ಸುಮಾರು 1000 ಮಂದಿಯನ್ನು ಬಂಧಿಸಿದ್ದರೂ, ನಗರವನ್ನೆ ಪೋಲೀಸ್ ನಗರವೆಂದು ತೋರುವಂತೆ ಪೋಲೀಸ್ ಬಂದೋಬಸ್ತು ಹಾಕಿದ್ದರೂ, ಮುಷ್ಕರ ಮಾತ್ರವಲ್ಲ ಬಂದ್ ಕಾರ್ಯಾಚರಣೆ ನಡೆಯಿತು. ಸಿ. ಐ. ಟಿ. ಯು.ವಿನ ರಾಜ್ಯ ಕೇಂದ್ರಕ್ಕೆ ಬಂದ ಸುದ್ದಿ ಪ್ರಕಾರ ಮೈಸೂರು, ದ. ಕ. ಜಿಲ್ಲೆ, ಹುಬ್ಬಳ್ಳಿ-ಧಾರವಾಡ, ಗುಲಬರ್ಗ ಜಿಲ್ಲೆ, ಬಿಜಾಪುರ ಜಿಲ್ಲೆ, ತುಮಕೂರು, ಶಿವಮೊಗ್ಗ, ರಾಯಚೂರು, ಹರಿಹರ, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಸಿರ್ಸಿ ಹಾಗೂ ಇನ್ನೂ ಅನೇಕ ಕಡೆಗಳಲ್ಲಿ ಮುಷ್ಕರ ಮಾತ್ರವಲ್ಲ, ಸಂಪೂರ್ಣ ಹರತಾಳವೂ ನಡೆಯಿತು. ದ. ಕ ಜಿಲ್ಲೆ, ಬಿಜಾಪುರ ಜಿಲ್ಲೆ, ಗುಲ್ಬರ್ಗ ಜಿಲ್ಲೆಗಳಂತಲ್ಲಿ ಜಿಲ್ಲೆಯಾದ್ಯಂತ ಸಂಪೂರ್ಣ ಬಂದ್ ನಡೆಯಿತು.

ಶಾಂತಯುತವಾಗಿ ಪ್ರತಿಭಟಿಸುತ್ತಿದ್ದ ಜನತೆಯ ಮೇಲೆ ಪೋಲೀಸ್ ದಬ್ಬಾಳಿಕೆ ನಡೆದ ಸುದ್ದಿ ಹಲವೆಡೆಗಳಿಂದ ಬಂದಿದೆ. ರಾಯಚೂರಿನಲ್ಲಿ ಸಾವಿರಾರು ಮಂದಿ ವಿದ್ಯಾರ್ಥಿ, ಯುವಜನತೆ ಮತ್ತು ಕಾರ್ಮಿಕರಿಂದ ಸೇರಿದ ಮೆರವಣಿಗೆಕಾರರ ಮೇಲೆ ಪೋಲೀಸರಿಂದ ಅಮಾನುಷ ಲಾಠಿ ಚಾರ್ಜ್; ಭದ್ರಾವತಿಯಲ್ಲಿ ರೈತ-ಕಾರ್ಮಿಕ ಮೆರವಣಿಗೆಕಾರರ ಮೇಲೆ ಲಾಠಿಚಾರ್ಜ್ ಮತ್ತು ಅಶ್ರುವಾಯು ಪ್ರಯೋಗ; ಬೆಂಗಳೂರಿನಲ್ಲಿ ಹಲವಾರು ಮಂದಿಯ ಬಂಧನ, ಲಾಕಪ್ಪಿ

(ಕಡೇ ಪುಟ ನೋಡಿ)

ಉ.ಕ.ದ ರೈತರಿಗೆ ಚಾತುನ್ನಿ ಮಾಸ್ಟರ್ ಅಭಿನಂದನೆ

ಅಖಿಲ ಭಾರತ ಕಿಸಾನ್ ಸಭೆಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ಚಾತುನ್ನಿ ಮಾಸ್ಟರ್ ಅವರು ದಿಟ್ಟ ಹೋರಾಟವನ್ನು ನಡೆಸುತ್ತಿರುವ ಕರ್ನಾಟಕದ ಅದರಲ್ಲೂ ಉತ್ತರ ಕನ್ನಡದ ನರಗುಂದ, ನವಲಗುಂದ ಮತ್ತು ಸೌಂದತ್ತಿ ತಾಲ್ಲೂಕಿನ ರೈತರಿಗೆ ತಮ್ಮ ಅಭಿನಂದನೆಗಳನ್ನು ತಿಳಿಸಿದ್ದಾರೆ. ಕರ್ನಾಟಕದ ರೈತರು ಅಖಿಲ ಭಾರತ ರೈತವರ್ಗದ ಕೆಲವು ಬೇಡಿಕೆಗಳನ್ನೇ ಮುಂದಿಟ್ಟಿದ್ದಾರೆ ಎಂದು ಅವರು ಇತ್ತೀಚೆಗೆ ಬಾಗೇಪಲ್ಲಿಗೆ ನೀಡಿದ ಭೇಟಿಯ ನಂತರ ಹೇಳಿದ್ದಾರೆ. ಅನೇಕ ರೈತರನ್ನು ಕೊಂದ ಕರ್ನಾಟಕ ಸರ್ಕಾರವನ್ನು ತೀವ್ರವಾಗಿ ಖಂಡಿಸುತ್ತಾ ಅವರು ಸರ್ಕಾರ ನೀಡಿರುವ ರಿಯಾಯಿತಿಗಳು ಸಾಲದು, ಇನ್ನಷ್ಟು ರೈತಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಗ್ರಾಮೀಣ ಸಾಲ ಮತ್ತು ಅಭಿವೃದ್ಧಿ, ಜಲ ಲೆವಿಗಳನ್ನು ಮನ್ನಾ ಮಾಡುವಂತೆ ಚಾತುನ್ನಿ ಮಾಸ್ಟರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈಗ ಸರ್ಕಾರ ಘೋಷಿಸಿರುವ ರಿಯಾಯಿತಿಗಳು ರೈತರ ಮೊದಲ ವಿಜಯ. ತಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕರ್ನಾಟಕದ ಎಲ್ಲ ರೈತ ಸಂಘಗಳು ಒಗ್ಗೂಡಿ ಹೋರಾಡಬೇಕೆಂದು ಅವರು ಕರೆ ನೀಡಿದ್ದಾರೆ. ಈಗ ರೈತರ ಮೇಲಿನ ಮೊಕದ್ದಮೆಗಳ ವಜಾ, ಗೋಲಿಬಾರಿಗೆ ಕಾರಣರಾದ ಪೋಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳ ವಜಾ, ಸತ್ತ ಹುತಾತ್ಮರ ಕುಟುಂಬಕ್ಕೆ 25,000 ರೂ. ಪರಿಹಾರ ಇವುಗಳನ್ನು ಚಾತುನ್ನಿ ಮಾಸ್ಟರ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ದೇಶದ ಎಲ್ಲ ರೈತರು ಮತ್ತು ಕೃಷಿಕಾರ್ಮಿಕರು ಕರ್ನಾಟಕದ ರೈತರ ನ್ಯಾಯಬದ್ಧ ಹೋರಾಟವನ್ನು ಬೆಂಬಲಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಕೋಣಿಯಲ್ಲಿ ಕೃಷಿ ಕೂಲಿಗಾರರ ಸಭೆ

ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದ ರೈತಸಂಘದ ನೇತೃತ್ವದಲ್ಲಿ ಕೃಷಿಕೂಲಿಗಾರರ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಗ್ರಾಮಪಂಚಾಯಿತಿ ಉಪಾಧ್ಯಕ್ಷ ಕೆ. ಅನಂತ ಪೂಜಾರಿ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಜಿಲ್ಲಾ ರೈತಸಂಘದ ಅಧ್ಯಕ್ಷ ಅಬ್ರಹಾಂ ಕರ್ಕಡ ಆಗಮಿಸಿದ್ದರು.

ಕೆ. ಆನಂದ ಭಂಡಾರಿಯವರು ಸ್ವಾಗತಿಸಿ ಸಭೆಯ ಉದ್ದೇಶಗಳನ್ನು ವಿವರಿಸಿದರು. ಕೊಯಿಲಿನ ಕೂಲಿ ಹೆಚ್ಚಳದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕೃಷಿಕೂಲಿಗಾರರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳ ಬಗ್ಗೆ ಹೋರಾಡಬೇಕು, ಆಳುವ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ರಾಜಕೀಯವಾಗಿ ಹೋರಾಡಬೇಕು ಎಂದು ಅಬ್ರಹಾಂ ಕರ್ಕಡ ಮಾತನಾಡಿದರು. ಕೊಯಿಲಿನ ಕೂಲಿಗೆ ಆಳೊಂದಕ್ಕೆ ಎಂಟು ಸೇರು ಬತ್ತವನ್ನು ಪಡೆಯುವ ಹೋರಾಟವನ್ನು ಮಾಡಲು ಸಭೆ ನಿರ್ಧರಿಸಿತು.

ರೈತಚಳುವಳಿ ಬೆಂಬಲಿಸಿ ಮೈಸೂರು ಬಂದ್

ಧಾರವಾಡ ಜಿಲ್ಲೆಯ ರೈತ ಚಳುವಳಿಗೆ ಬೆಂಬಲ ಮತ್ತು ಬೆಲೆ ಏರಿಕೆ ವಿರೋಧಿಸಲು ಮೈಸೂರಿನ ವಿರೋಧಪಕ್ಷಗಳ ಕ್ರಿಯಾಸಮಿತಿ ಮೈಸೂರು ಬಂದ್‌ಗೆ ಕರೆನೀಡಿತ್ತು.

ಆಗಸ್ಟ್ ಒಂದರ ಈ ಬಂದ್ ಬಗ್ಗೆ ಮಾತುಕತೆ ನಡೆಸಲು 31-7-80 ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಎಲ್ಲ ವಿರೋಧಪಕ್ಷಗಳ ಸಭೆ ಕರೆಯಲಾಗಿತ್ತು. ಈ ಬಗ್ಗೆ ಕ್ರಿಯಾ ಸಮಿತಿ ಒಂದು ಸಭೆ ನಡೆಸಿ, ಜಿಲ್ಲಾಧಿಕಾರಿಗಳು ಮನವಿ ಮಾಡಿದರೂ ಬಂದ್ ನಡೆಸಲೇಬೇಕೆಂದು ತೀರ್ಮಾನ ಕೈಗೊಂಡಿತ್ತು. ಜಿಲ್ಲಾಧಿಕಾರಿಗಳ ಕಚೇರಿಗೆ ಹೋದಾಗ, ಅಲ್ಲಿ ಕಾಂಗ್ರೆಸ್ (ಐ) ಮುಖಂಡರೊಂದಿಗೆ ಮಾತನಾಡುತ್ತಿದ್ದ ಜಿಲ್ಲಾಧಿಕಾರಿಗಳು ವಿರೋಧಪಕ್ಷಗಳ ಪ್ರತಿನಿಧಿಗಳನ್ನು ಸ್ವಲ್ಪ ಹೊತ್ತು ಹೊರಗಡೆ ಇರಿ ಎಂದರು. ಇದರಿಂದ ಕುಪಿತರಾದ ಪ್ರತಿನಿಧಿಗಳು ಜಿಲ್ಲಾಧಿಕಾರಿಗಳ ವಿರುದ್ಧ ಘೋಷಣೆ ಕೂಗುತ್ತಾ ನಡೆದರು. ನಂತರ ಮರದ ಕೆಳಗೆ ಕೂತಿದ್ದ ಪ್ರತಿನಿಧಿಗಳ ಬಳಿ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಸೂಪರಿಂಟೆಂಡೆಂಟರು ಬಂದು ಕ್ಷಮೆಯಾಚಿಸಿ ಕರೆದೊಯ್ದರು. ನಂತರ ಅವರಿಗೆ ನೀಡಿದ ಭರವಸೆಯಂತೆ ಶಾಂತರೀತಿಯಲ್ಲಿ ಬಂದ್ ಆಚರಿಸಲಾಯಿತು.

ಆಗಸ್ಟ್ ಒಂದರಂದು ಬೆಳಗ್ಗೆ 10 ಗಂಟೆಗೆ ಸುಮಾರು ಹತ್ತು ಸಾವಿರ ಜನರು ಮೆರವಣಿಗೆ ನಡೆಸಿದ್ದರು. ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ. ಯ ಕೆಲಸಗಾರರು ಅಧಿಕಸಂಖ್ಯೆಯಲ್ಲಿ ಭಾಗವಹಿಸಿ, ಕೆಂಬಾವುಟಗಳನ್ನು ಮೆರೆಸಿದರು. ನಂತರ ಸಂಜೆ ನಡೆದ ಭಾರಿ ಬಹಿರಂಗ ಸಭೆಯಲ್ಲಿ ವಿವಿಧ ಪಕ್ಷಗಳ ಪ್ರತಿನಿಧಿಗಳು ಮಾತನಾಡಿದರು.

ಮೈಕೋ ಕಾರ್ಮಿಕರಿಂದ ತ್ರಿಪುರಾಕ್ಕೆ ಸಹಾಯ

ಬೆಂಗಳೂರಿನ ಮೈಕೋ ಕಾರ್ಮಿಕರು ತ್ರಿಪುರಾ ರಾಜ್ಯದಲ್ಲಿನ ಪರಿಹಾರ ಕಾರ್ಯಕ್ಕೆ ಸಹಾಯವಾಗಿ ಐದು ಸಹಸ್ರ ರೂಪಾಯಿಗಳನ್ನು ಕಳುಹಿಸಲು ತೀರ್ಮಾನಿಸಿರುವರು.

ಹಾಸ್ಟೆಲ್ ಅವ್ಯವಹಾರಕ್ಕೆ ಪ್ರತಿಭಟನೆ

ತಿಪಟೂರಿನ ಪ್ರಿವೆಟ್ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಕೊಡಲಾಗುವ ಅಕ್ಕಿ, ರಾಗಿ, ಬೆಡ್‌ಶೀಟುಗಳು, ಬಟ್ಟೆಗಳನ್ನು ಮಾರುತ್ತಿದ್ದುದನ್ನು ಪತ್ತೆಹಚ್ಚಿದ ಎಸ್. ಎಫ್. ಐ. ಮತ್ತು ಡಿ. ಎಸ್. ಎಸ್. ಕಾರ್ಯಕರ್ತರು ಇದರ ವಿರುದ್ಧ ಅಸಿಸ್ಟೆಂಟ್ ಕಮಿಷನರರ ಮುಂದೆ ಪ್ರತಿಭಟನೆ ವ್ಯಕ್ತಪಡಿಸಿದರು. ಈ ಪ್ರದರ್ಶನದ ನಾಯಕತ್ವವನ್ನು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಆರ್. ಎಸ್. ಚೆನ್ನಬಸವಣ್ಣ, ಎಸ್. ಎಫ್. ಐ. ಕಾರ್ಯದರ್ಶಿ ಜಯಶಂಕರ, ಡಿ. ಎಸ್. ಎಸ್. ಸಂಚಾಲಕ ತಿಮ್ಮಯ್ಯ ಮತ್ತಿತರರು ವಹಿಸಿದ್ದರು. ಈ ಬಗ್ಗೆ ತನಿಖೆ ನಡೆಸುವಂತೆ ಅವರು ಒತ್ತಾಯಿಸಿದ್ದಾರೆ.

ಕಾಸರಗೋಡಿನಲ್ಲಿ ವಿದ್ಯಾರ್ಥಿಗಳ ಜಾಥಾ

ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕಾಸರಗೋಡು ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 6, 7 ರಂದು ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳಿಗಾಗಿ ಜೀಪ್‌ಜಾಥಾ ನಡೆಸಿದರು. ಹತ್ತನೇ ತರಗತಿಯವರೆಗೆ ಇರುವ ಸ್ಪೆಷಲ್ ಫೀಸುಗಳು ರದ್ದಾಗಬೇಕು, ಪ್ರಿಡಿಗ್ರಿ ವಿದ್ಯಾಭ್ಯಾಸ ಉಚಿತವಾಗಿ ಸಿಗಬೇಕು, ವಿದ್ಯಾರ್ಥಿಗಳಿಗೆ ಬಸ್‌ಸೌಕರ್ಯ ಒದಗಿಸಬೇಕು, ಕೇಂದ್ರದ ಬಜೆಟ್ಟಿನಲ್ಲಿ ಶೇ. 10ರಷ್ಟು ವಿದ್ಯಾಭ್ಯಾಸ ರಂಗಕ್ಕೆ ಮೀಸಲಿಡಬೇಕು ಇವು ಎಸ್. ಎಫ್. ಐ. ನ ಬೇಡಿಕೆಗಳಾಗಿವೆ.

ಈ ಜೀಪ್‌ಜಾಥಾ 5-8-80 ರಂದು ಬಂದಡ್ಕದಲ್ಲಿ ಉದ್ಘಾಟನೆಯಾಯಿತು. ಮಾರ್ಕ್ಸ್‌ವಾದಿ ಪಕ್ಷದ ಬಂದಡ್ಕ ಸಮಿತಿ ಕಾರ್ಯದರ್ಶಿ ಕಾಂ. ಟಿ. ಅಪ್ಪ ಇದನ್ನು ಉದ್ಘಾಟಿಸಿದರು. ನಂತರ ಮುನ್ನಡೆದ ಜಾಥಾ ದಾರಿಯಲ್ಲಿ 13 ಹೈಸ್ಕೂಲುಗಳನ್ನು ಸಂದರ್ಶಿಸಿ ಮೊದಲ ದಿನದ ಕಾರ್ಯಕ್ರಮ ಮುಗಿಸಿತು. ಎರಡನೇ ದಿನ 12 ಹೈಸ್ಕೂಲು ಮತ್ತು ಕಾಸರಗೋಡಿನ ಸರ್ಕಾರಿ ಕಾಲೇಜನ್ನು ಸಂದರ್ಶಿಸಿ ಸಂಜೆ ಐದು ಗಂಟೆಗೆ ಬಹಿರಂಗ ಅಧಿವೇಶನ ನಡೆಸಿತು. ಎಲ್ಲ ಕಡೆ ಜಾಥಾಗೆ ಪ್ರಚಂಡ ಪ್ರೋತ್ಸಾಹ ಸಿಕಿತು. ಸಿ. ಐ. ಟಿ. ಯು. ಕಾಸರಗೋಡಿನಲ್ಲಿ ಜಾಥಾವನ್ನು ಸ್ವಾಗತಿಸಿತು.

ವಿವಿಧ ಹೈಸ್ಕೂಲುಗಳಲ್ಲಿ ಕಾಂ.ಗಳಾದ ಸಿ. ಎಚ್. ಕುಂಞಂಬು, ಗೋಪಾಲಕೃಷ್ಣ, ಇಬ್ರಾಹಿಂ ಪೈವಳಿಕೆ, ಹೇಮಲತಾ, ಶೆಲ್ಲಿ, ಜಯರಾಮನ್ ಮತ್ತು ಕುಂಞರಾಮನ್ ಮಾತನಾಡಿದರು. ಕನ್ನಡ ಪ್ರಧಾನ ಹೈಸ್ಕೂಲುಗಳಲ್ಲಿ ಇಬ್ರಾಹಿಂ ಪೈವಳಿಕೆ ಮತ್ತು ಶೆಲ್ಲಿ ಮಾತನಾಡಿದರು.

ಎಸ್. ಎಫ್. ಐ. ಸದಸ್ಯರ ಗಮನಕ್ಕೆ

ಎಸ್. ಎಫ್. ಐ. ಕೇಂದ್ರಸಮಿತಿಯ ಮತ್ತು ಸ್ಟೂಡೆಂಟ್ಸ್ ಸ್ಟ್ರಗಲ್ ಪತ್ರಿಕೆಯ ಕಛೇರಿಯನ್ನು ಬದಲಾಯಿಸಿದ್ದು ಇನ್ನು ಮುಂದೆ ಈ ಕೆಳಕಂಡ ವಿಳಾಸದ ಮೂಲಕ ವ್ಯವಹರಿಸಬೇಕಾಗಿ ವಿನಂತಿ.

210,
ವಿಠಲ್‌ಭಾಯಿ ಪಟೇಲ್ ಹೌಸ್,
ರಫಿ ಮಾರ್ಗ್,
ನ್ಯೂಡೆಲ್ಲಿ-110001

ಪಕ್ಷದ ಪುತ್ತೂರು ನಗರ ಸಮಿತಿ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪುತ್ತೂರು ನಗರ ಸಮಿತಿಯು 13-8-80ರಂದು ಸಭೆ ಸೇರಿತ್ತು. ಸಭೆಯಲ್ಲಿ ಅಗತ್ಯಸೇವಾ ಮಸೂದೆಯ ವಾಪಸಾತಿ, ಕಾರ್ಮಿಕ-ಮಾಲೀಕ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪ ನಿಲುಗಡೆ, ನರಗುಂದ ಮತ್ತಿತರ ರೈತರ ಮೇಲಿನ ಕಾನೂನು ಕ್ರಮಗಳನ್ನು ಕೈಬಿಡಬೇಕು ಮತ್ತು ಬೆಲೆಏರಿಕೆ ನಿಯಂತ್ರಣ ಇವುಗಳನ್ನು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

18-8-80ರ ಸಾರ್ವತ್ರಿಕ ಮುಷ್ಕರಕ್ಕೆ ಸಮಿತಿ ಸಂಪೂರ್ಣ ಬೆಂಬಲ ಕೊಟ್ಟಿತ್ತು.

ಹೋಟೆಲ್ ಕಾರ್ಮಿಕರ ಮೆರವಣಿಗೆ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಆಶ್ರಯದಲ್ಲಿ ನಗರದ ಗ್ರಾಂಡ್ ನ್ಯಾಷನಲ್ ಹೋಟೆಲ್ ಕಾರ್ಮಿಕರು 17-8-80 ರಂದು ಮಾಲೀಕರ ಧೋರಣೆ ವಿರುದ್ಧ ಮೆರವಣಿಗೆ ನಡೆಸಿದರು. ಇದೇ ಮಾಲೀಕರ ಹೋಟೆಲ್ ಸೆಲೆಕ್ಟ್ ಮುಂದೆ ಮುಷ್ಕರ ನಡೆಸಲು ಕಾರ್ಮಿಕರು ತೀರ್ಮಾನಿಸಿದ್ದರು. ಆದರೆ ಸಿವಿಲ್ ನ್ಯಾಯಾಲಯದ ಇನ್‌ಜೆಕ್ಷನ್ ತಂದು ಅದನ್ನು ತಡೆಯಲಾಗಿತ್ತು. ಕಾರ್ಮಿಕರು ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಆರಂಭಿಸಿ ಮೆರವಣಿಗೆಯನ್ನು ಸೆಲೆಕ್ಟ್, ಒಲಿಂಪಸ್ ಹೋಟೆಲ್ ಮತ್ತು ಮಾಲೀಕರ ಮನೆ ಎದುರು ಘೋಷಣೆ ಕೂಗುತ್ತಾ ನಡೆದರು. ಮೆರವಣಿಗೆಯ ಮುಂದೆ ಮತ್ತು ಹಿಂದೆ ಪೋಲೀಸ್ ಕಾವಲಿತ್ತು. ಮಾಲೀಕರ ಮನೆ ಮುಂದೆಯೂ ಪೋಲೀಸ್ ಕಾವಲಿತ್ತು. ನಂತರ ರಸೆಲ್ ಮಾರ್ಕೆಟ್ ಎದುರು ಬಹಿರಂಗ ಸಭೆ ನಡೆಯಿತು. ಕಾಂ. ಕೆ. ಪಿ. ಎ. ಲಾಲ್ ಮತ್ತು ಕಾಂ. ರಾಜನ್ ಸಭೆಯಲ್ಲಿ ಮಾತನಾಡಿದರು. ತಮ್ಮ ಬೇಡಿಕೆ ಈಡೇರುವವರೆಗೂ ಹೋರಾಟ ನಡೆಸಲು ಕಾರ್ಮಿಕರು ತೀರ್ಮಾನಿಸಿದ್ದಾರೆ.

ತಿಪಟೂರಿನಲ್ಲಿ ಸೌದೆ ಮಾರಾಟ ಬಂದ್

ತಿಪಟೂರು ತಾಲ್ಲೂಕು ಮರದ ವ್ಯಾಪಾರಿಗಳ ಸಂಘದ ಸೌದೆದಾರರವರ ಬಳಿ ಪೋಲೀಸಿನವರು ಲಾರಿಗೆ 500ರೂ. ಗಾಡಿಗೆ 25ರೂ. ಲಂಚ ಪಡೆಯುತ್ತಿರುವುದು ಪತ್ತೆಯಾಗಿದೆ. ಇದನ್ನು ವಿರೋಧಿಸಲು ಕಾಂ. ಆರ್. ಎಸ್. ಚೆನ್ನಬಸವಣ್ಣನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಒಂದು ದಿನ ಸೌದೆ ವ್ಯಾಪಾರ ಬಂದ್ ಮಾಡಿ ಪ್ರತಿಭಟಿಸಲಾಯಿತು. ಇದನ್ನು ಕಂಡು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರು ಲಂಚದ 500 ರೂ ಅನ್ನು ವ್ಯಾಪಾರಿಗಳಿಗೆ ಹಿಂತಿರುಗಿಸಿದರು. ಆರ್. ಎಸ್. ಚೆನ್ನಬಸವಣ್ಣನವರ ಅಧ್ಯಕ್ಷತೆಯ 15 ಮಂದಿ ಸಮಿತಿಯ ನಾಯಕತ್ವದಲ್ಲಿ ಲಂಚದ ವಿರುದ್ಧ ಹೋರಾಡಲು ಸೌದೆ ಮಾರಾಟಗಾರರು ನಿರ್ಧರಿಸಿದ್ದಾರೆ.

‘ರೈತರ ದಿವಾಳಿಗೆ ಕೇಂದ್ರದ ಆರ್ಥಿಕ ನೀತಿಗಳೇ ಕಾರಣ’

ರಾಷ್ಟ್ರದ ಎಲ್ಲಾ ಭಾಗದ ರೈತರು ದಿವಾಳಿಯಾಗಿ ದರಿದ್ರರಾಗುತ್ತಿರುವುದಕ್ಕೆ ಕೇಂದ್ರ ಸರ್ಕಾರವು ಅನುಸರಿಸಿಕೊಂಡು ಬರುತ್ತಿರುವ ರೈತ ವಿರೋಧಿ ಆರ್ಥಿಕ ನೀತಿಗಳೇ ಕಾರಣವೆಂದು ಅಖಿಲ ಭಾರತ ಕಿಸಾನ್‌ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ತರ್ ಅವರು ಹೇಳಿದ್ದಾರೆ.

ಪ್ರಾಂತ ರೈತಸಂಘವು ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಿಸಾನ್‌ಸಭಾ ಕಾರ್ಯದರ್ಶಿಗಳು ಕೇಂದ್ರದ ರೈತ ವಿರೋಧಿ ನೀತಿಗಳ ವಿರುದ್ಧ ಹೋರಾಡದೆ ಪರಿಸ್ಥಿತಿ ಸುಧಾರಿಸಲು ಸಾಧ್ಯವಿಲ್ಲ ಎಂದು ಹೇಳಿ ಸಂಘಟಿತ ಹೋರಾಟಕ್ಕೆ ಕರೆ ಕೊಟ್ಟರು.

ರಾಜ್ಯದ ಉತ್ತರ ಭಾಗದಲ್ಲಿ ಇತ್ತೀಚೆಗೆ ನಡೆದ ರೈತ ಚಳುವಳಿಯನ್ನು ಸಂಪೂರ್ಣವಾಗಿ ಬೆಂಬಲಿಸಿ ರೈತ ಚಳುವಳಿಗಾರರನ್ನು ಅಭಿನಂದಿಸಿದ ಚಾತುನ್ನಿ ಮಾಸ್ತರ್ ಅವರು, ರೈತರಿಗೆ ಸರ್ಕಾರವು ತೋರಿಸುವ ರಿಯಾಯಿತಿಯೂ ಏನೇನೂ ಸಾಲದೆಂದರು.

ಪೋಲೀಸರೂ ಸೇರಿದಂತೆ ಚಳುವಳಿಯಲ್ಲಿ ಪ್ರಾಣತೆತ್ತ ಬಡ ರೈತರಿಗೆ ಕಾಂ. ಚಾತುನ್ನಿ ಮಾಸ್ತರ್ ತಮ್ಮ ಗೌರವ ಅರ್ಪಿಸಿದರು ಮತ್ತು ಮಡಿದ ಕುಟುಂಬದ ಸದಸ್ಯರಿಗೆ ಕಿಸಾನ್‌ಸಭಾದ ಸಂತಾಪ ವ್ಯಕ್ತಪಡಿಸಿದರು.

ಕೇಂದ್ರದ ಜನವಿರೋಧಿ ನೀತಿಗಳಿಂದಾಗಿ ಒಂದು ಕಡೆ ರೈತರ ಉತ್ಪನ್ನಗಳಿಗೆ ಅತ್ಯಂತ ಕಡಿಮೆ ಬೆಲೆ ಸಿಕ್ಕಿದರೆ ಮತ್ತೊಂದು ಕಡೆ ಬಳಕೆದಾರರಿಗೆ ಬೆಲೆ ಏರಿಕೆಯ ಬಿಸಿ ಸದಾ ತಟ್ಟುತ್ತಲೇ ಇರುವಂತಾಗಿದೆ ಎಂದು ಚಾತುನ್ನಿ ಮಾಸ್ತರ್ ನುಡಿದರು.

ಬೆಲೆಗಳನ್ನು ಇಳಿಸುತ್ತೇನೆ, ಹತೋಟಿಯಲ್ಲಿ ಇಡುತ್ತೇನೆ ಎಂಬ ಅಬ್ಬರದ ಪ್ರಚಾರಗಳೊಡನೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು, ಪೆಟ್ರೋಲಿಯಂ, ರೈಲ್ವೆ, ರಾಸಾಯನಿಕ ಗೊಬ್ಬರಗಳ ಬೆಲೆಯನ್ನು ತಾನೇ ಹೆಚ್ಚಿಸಿತು ಎಂದ ಕಿಸಾನ್ ಸಭಾ ಕಾರ್ಯದರ್ಶಿಗಳು ಇದು ಕಾಂಗ್ರೆಸ್ ಪಕ್ಷದ ಭರವಸೆಗಳಿಗೆ ವಿರೋಧವಾದ ಕೃತ್ಯ ಎಂದರು.

ಅತ್ಯಂತ ಸಮಂಜಸ ಮತ್ತು ಸಿಹಿಯಾದ ಬಜೆಟ್ಟು ತಮ್ಮದು ಎಂದು ಹೇಳಿಕೊಳ್ಳುವ ಕೇಂದ್ರದ ಅರ್ಥ ಮಂತ್ರಿ ವೆಂಕಟರಾಮನ್ ಅವರ ಬಜೆಟ್ಟನ್ನು ವಿವರವಾಗಿ ಸಭೆಗೆ ವಿವರಿಸಿದ ಕಾಂ. ಚಾತುನ್ನಿ ಮಾಸ್ತರ್ ಅವರು, ಸರ್ಕಾರವು ಒಟ್ಟು 5110 ಕೋಟಿ ರೂಗಳ ತೆರಿಗೆಯನ್ನು ಜನತೆಯ ಮೇಲೆ ಹೇರಿದೆ ಎಂದರು. ಈ ಕಂಭಾರದಿಂದ ರಾಷ್ಟ್ರದ ರೈತರು ಹಾಗು ಸಾಮಾನ್ಯ ಜನರ ಬೆನ್ನು ಬಗ್ಗಿ ಹೋಗಿದೆ ಎಂದು ಅವರು ಹೇಳಿದರು.

ಕೇರಳ, ಬಂಗಾಳ ರಾಜ್ಯಗಳ ಎಡರಂಗ ಸರ್ಕಾರಗಳು ರೈತರ ಸಾಲಗಳನ್ನು ವಜಾ ಮಾಡುತ್ತಿರುವ ಕ್ರಮಗನ್ನು ಮಹಾರಾಷ್ಟ್ರ ಹಾಗು ತಮಿಳುನಾಡು ಸರ್ಕಾರಗಳು ಅನುಸರಿಸಿ ರೈತರಿಗೆ ಸ್ವಲ್ಪ ಪರಿಹಾರ ನೀಡಿದರೂ ಇತರ ಸರ್ಕಾರಗಳು ಹಾಗೆ ಮಾಡುತ್ತಿಲ್ಲ ಎಂದು ಕಿಸಾನ್‌ಸಭಾ ಕಾರ್ಯದರ್ಶಿಗಳು ದೂಷಿಸಿದರು.

ಕೂಲಿಗಾರರಿಗೆ ನಿವೃತ್ತಿ ವೇತನ :

ಕೇರಳ ಮತ್ತು ಪ. ಬಂಗಾಳ ಸರ್ಕಾರಗಳು ಬೇಸಾಯ ಕೂಲಿಗಾರರಿಗೆ ನಿವೃತ್ತಿ ವೇತನ ಕೊಡುತ್ತಿರುವಂತೆ ಇತರೆ ರಾಜ್ಯಗಳೂ ಸಹ ಕೊಡಬೇಕೆಂದು ಕಿಸಾನ್‌ಸಭಾ ಕಾರ್ಯದರ್ಶಿಗಳು ಆಗ್ರಹಪಡಿಸಿದರು. ರೈತರ ಮತ್ತು ಕೃಷಿಕೂಲಿಗಾರರ ಎಲ್ಲಾ ಸಮಸ್ಯೆಗಳಿಗೆ ತುರ್ತುಗಮನ ಕೊಡಬೇಕೆಂದು ಕಾಂ. ಚಾತುನ್ನಿ ಮಾಸ್ತರ್ ಅವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಮನವಿ ಮಾಡಿದರು. ಸಮಸ್ಯೆಗಳನ್ನು ಪರಿಹರಿಸದಿದ್ದರೆ ಹೋರಾಟಕ್ಕೆ ಸಿದ್ಧರಾಗಬೇಕೆಂದೂ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಲಾಠಿ ಗುಂಡುಗಳಿಗೆ ಜಗ್ಗದೆ ಹೋರಾಟ ಮಾಡಿ ರೈತಸಂಘವನ್ನು ಒಂದು ಮಹಾ ಶಕ್ತಿಯಾಗಿ ಬೆಳೆಸಬೇಕೆಂದು ಕಾಂ. ಚಾತುನ್ನಿ ಮಾಸ್ತರ್ ಪ್ರಾಂತ ರೈತಸಂಘದ ಕಾರ್ಯಕರ್ತರಿಗೆ ಕರೆ ಕೊಟ್ಟರು,

ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ ರಾಮಚಂದ್ರರಾವ್ ಅವರು ಚಾತುನ್ನಿ ಮಾಸ್ತರ್ ಅವರ ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪನವರು ಸ್ವಾಗತ ಹಾಗೂ ವಂದನಾರ್ಪಣೆ ಮಾಡಿದರು,

ಕೌನ್ಸಿಲ್ ಮೀಟಿಂಗ್–ಕಾರ್ಯಕರ್ತರ ಶಿಕ್ಷಣ :

ಪ್ರಾಂತ ರೈತಸಂಘದ ರಾಜ್ಯ ಮಂಡಳಿಯ ಸಭೆಯು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಆ. 12, 13, 14 ರಂದು ನಡೆಯಿತು. ರಾಜ್ಯದ 15 ಜಿಲ್ಲೆಗಳಿಂದ ಆಗಮಿಸಿದ್ದ ಪ್ರಾಂತ ರೈತಸಂಘದ ರಾಜ್ಯಮಂಡಳಿಯ 45 ಸದಸ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು.

ರೈತ ಸಂಘಟನೆಯ ಮಹತ್ವ, ರೈತ ಸಂಘಟನೆಯನ್ನು ಮತ್ತು ಚಳುವಳಿಯನ್ನು ಬಲಿಷ್ಟಗೊಳಿಸುವ ಬಗೆಗೆ ಕೂಲಂಕಷ ಚರ್ಚೆಯು ಸಭೆಯಲ್ಲಿ ಜರುಗಿತು. 15 ಜಿಲ್ಲೆಗಳಿಂದ ಆಗಮಿಸಿದ್ದ ರೈತಸಂಘದ ಮುಖಂಡರುಗಳು ತಮ್ಮ ತಮ್ಮ ಜಿಲ್ಲೆಯ ವರದಿಗಳನ್ನೊಪ್ಪಿಸಿದರು.

ಪ್ರಾಂತ ರೈಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ರೈತಸಂಘದ ಚಟುವಟಿಕೆಗಳ ವರದಿಯನ್ನು ಸಭೆಯ ಮುಂದಿಟ್ಟರು. ವರದಿಯ ಮೇಲೆ ವಿವರವಾದ ಚರ್ಚೆನಡೆದು ವರದಿಯು ಅಂಗೀಕರಿಸಲ್ಪಟ್ಟಿತು. ಮಂಡಳಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಕಾಂ. ರಾಮಚಂದ್ರರಾವ್ ಅವರು, ಪ್ರಾಂತ ರೈತಸಂಘವು ಸದಸ್ಯತ್ವನೊಂದಾಯಿಸುವುದರಲ್ಲಿ ಹಿಂದೆ ಬಿದ್ದಿದೆ ಎಂತಲೂ, ಸಂಘಟನೆಯನ್ನು ಶಿಸ್ತುಬದ್ಧವಾಗಿ ಬೆಳೆಸದೇ ಇದ್ದರೆ ಮತ್ತು ದೊಡ್ಡ ಪ್ರಮಾಣದಲ್ಲಿ ಬೆಳೆಸದಿದ್ದರೆ ರೈತ ಚಳುವಳಿಯನ್ನು ವ್ಯವಸ್ಥಿತ ಮಾರ್ಗದಲ್ಲಿ ಕಟ್ಟಲು ಸಾಧ್ಯವಿಲ್ಲ ಎಂದೂ ಹೇಳಿದರು. ಬೇಸಾಯ ಕೂಲಿಗಾರರು ಮತ್ತು ಸಣ್ಣ ಹಾಗೂ ಮಧ್ಯಮ ವರ್ಗದ ರೈತರನ್ನು ಸಂಘಟನೆಗೆ ಹೆಚ್ಚುಹೆಚ್ಚಾಗಿ ಸೇರಿಸಿಕೊಳ್ಳುವ ಕೆಲಸವು ಸ್ಥಳೀಯ ಮುಂದಾಳುಗಳಿಂದ ಆಗಬೇಕು ಎಂದೂ ಸಹ ಕಾಂ. ಪಿ. ಆರ್. ಅಭಿಪ್ರಾಯಪಟ್ಟರು.

ಮೂರು ದಿವಸಗಳ ಕಾಲ ನಡೆದ ಮಂಡಳಿಯ ಸಭೆಯಲ್ಲಿ ಪ್ರಾಂತ ರೈತಸಂಘದ ಕಾರ್ಯಕರ್ತರಿಗೆ ರಾಜಕೀಯ ಶಿಕ್ಷಣ ಶಾಲೆಯನ್ನೂ ನಡೆಸಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು "ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆ ಮತ್ತು ರೈತರ ಸಮಸ್ಯೆ" ಬಗ್ಗೆ ಉಪನ್ಯಾಸ ಮಾಡಿದರು. ಲೆನಿನ್ ಮತ್ತು ಭೂಮಿಯ ಪ್ರಶ್ನೆ, ರೈತಸಂಘಟನೆಯನ್ನು ಬೆಳೆಸುವುದು, ಮತ್ತು ದೇಶದ ಆರ್ಥಿಕ–ಸಾಮಾಜಿಕ ಪರಿಸ್ಥಿತಿ ಬಗ್ಗೆ ಕಾಂ. ಪಿ. ರಾಮಚಂದ್ರರಾವ್ ಅವರು ಉಪನ್ಯಾಸ ನೀಡಿದರು.

ಪ್ರಾಂತ ರೈತಸಂಘದ ಸಭೆಯಲ್ಲಿ ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಹಾಗೂ ಎಸ್. ಎಫ್. ಐ. ನ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯ ಅವರು ಮಾತನಾಡಿ ರೈತಸಂಘಕ್ಕೆ ಶುಭಕೋರಿದರು. ರೈತಸಂಘದ ಚಳುವಳಿಯ ಬೆಳವಣಿಗೆಗೆ ತಮ್ಮ ಸಂಘಟನೆಗಳ ಸಹಾಯ–ಸಹಕಾರಗಳನ್ನು ಸಹ ಕೊಡುವುದಾಗಿ ಅವರುಗಳು ಹೇಳಿದರು,

●

ಜನಸ್ವಾತಂತ್ರ್ಯಕ್ಕಾಗಿ ದಲಿತರ ಮೆರವಣಿಗೆ

“ಪ್ರತಿವರ್ಷ ಆಗಸ್ಟ್ 15 ರಂದು ಆಚರಿಸಲಾಗುತ್ತಿರುವ ಸ್ವಾತಂತ್ರ್ಯ ದಿನಾಚರಣೆಯು ಅರ್ಥವಿಲ್ಲದ್ದು, ಏಕೆಂದರೆ ಜನತೆಗೆ ಅನ್ನವಿಲ್ಲದ ಸ್ವಾತಂತ್ರ್ಯ ಅರ್ಥಹೀನ”,

ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಚಾಲಕ ಬಿ. ಕೃಷ್ಣಪ್ಪನವರು, ದಲಿತ ಸಂಘರ್ಷ ಸಮಿತಿಯು ಸ್ವಾತಂತ್ರ್ಯೋತ್ಸವದಂದು ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಿದ್ದ ಮೆರವಣಿಗೆಯ ಅಂತ್ಯದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೃಷ್ಣಪ್ಪನವರು ದಲಿತ ಜನತೆಗೆ ಸ್ವಾತಂತ್ರ್ಯ ಬಂದಿಲ್ಲ ಎಂದರು. ಭೂಮಿಗೆ ಸಂಬಂಧಿಸಿದ ವಿವಾದಗಳಲ್ಲಿ ಹಲವಾರು ತಡೆಯಾಜ್ಞೆಗಳನ್ನು ರಾಜ್ಯದ ಹೈಕೋರ್ಟಿನಲ್ಲಿ ಆಸಕ್ತ ಹಿತಗಳು ತಂದು ಭೂಹೀನರಿಗೆ ಭೂಮಿ ಸಿಗದಂತೆ ಮಾಡಿವೆ ಎಂದ ಸಂಘರ್ಷ ಸಮಿತಿಯ ಸಂಚಾಲಕರು ಈ ತಡೆಆಜ್ಞೆಗಳನ್ನು ರದ್ದುಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದ ಹಳ್ಳಿ ಜನರನ್ನೂ ಒಳಗೊಂಡಂತೆ ಸುಮಾರು 3000 ಕಾರ್ಯಕರ್ತರು ಸಂಘರ್ಷ ಸಮಿತಿಯ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಹೊರಟ ದಲಿತರ ಮೆರವಣಿಗೆಯು ನಗರದ ನಾನಾ ಬೀದಿಗಳಲ್ಲಿ ಹಾದು ಹೋದಿ ಕಬ್ಬನ್‌ಪಾರ್ಕಿನಲ್ಲಿ ಮುಕ್ತಾಯಗೊಂಡಿತು,

ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕವಿ ಸಿದ್ಧಲಿಂಗಯ್ಯ ಅವರು, 1947ರಲ್ಲಿ ಬಂದ ಸ್ವಾತಂತ್ರ್ಯವು ಈ ದೇಶದ ಬಂಡವಾಳಗಾರರಿಗೆ ಮತ್ತು ಜಮೀನುದಾರರಿಗೆ ಬಂದ ಸ್ವಾತಂತ್ರ್ಯ ಎಂದರು. ಜನತೆಗೆ ನಿಜ ಸ್ವಾತಂತ್ರ್ಯ ಬರಬೇಕಾದರೆ ದುಡಿಯುವ ಜನ ಒಂದಾಗಿ ಹೋರಾಡಬೇಕೆಂತಲೂ, ನಮ್ಮ ನಡುವಿನ ಆರ್ಥಿಕ ಸಾಮಾಜಿಕಅಸಮಾನತೆಯ ನಿವಾರಣೆಗೆ ವರ್ಗ ಹಾಗೂ ವರ್ಣ ಹೋರಾಟಗಳು ಜೊತೆಜೊತೆಯಾಗಿ ನಡೆಯಬೇಕೆಂದು ನುಡಿದರು. ಪತ್ರಕರ್ತ ಶಂಕರಲಾಳಾಪುರ ಅವರು ಈ ಸಂದರ್ಭದಲ್ಲಿ ಮಾತನಾಡಿ ದಲಿತ ಸಂಘರ್ಷ ಸಮಿತಿಯು ಹಳ್ಳಿಯ ಬಡವರ, ಬೇಸಾಯ ಕೂಲಿಗಾರರ ಬಲಿಷ್ಟ ಸಂಘಟನೆಯಾಗಿ ಬೆಳೆಯಬೇಕೆಂದು ಆಶಿಸಿದರು,

ದುಬಾರಿ ಖರ್ಚಿನಿಂದ ವ್ಯವಸ್ಥಿತವಾಗಿ ಅತ್ಯಂತ ಸಂಭ್ರಮ ಸಡಗರಗಳಿಂದ ಆಚರಿಸಲ್ಪಟ್ಟ ಸರ್ಕಾರಿ ಸಮಾರಂಭಗಳಿಗೆ ದಲಿತರ ಸಿಟ್ಟಿನ ಘೋಷಣೆಗಳು ಮತ್ತು ಮೆರವಣಿಗೆ ಹಲವು ಪ್ರಶ್ನೆಗಳನ್ನು ಹಾಕಿದಂತಿತ್ತು.

ಕುಣಿಗಲ್‌ನಲ್ಲಿ :

ಕರ್ನಾಟಕ ದಲಿತ ಸಂಘರ್ಷ ಸಮಿತಿ ಕರೆಯ ಮೇರೆಗೆ ತುಮಕೂರು ಜಿಲ್ಲೆ ಕುಣಿಗಲ್ ಶಾಖೆಯು ‘ಕರಾಳ ದಿನ’ವನ್ನು ಆ. 15ರಂದು ಆಚರಿಸಿತು,

ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಪ್ರಾಂತ ರೈತಸಂಘದ ಖಜಾಂಚಿ ಕಾಂ, ಪಿ, ಜಗನ್ನಾಥ್, ದ.ಸಂ.ಸ.ಯ ಕಾರ್ಯಕರ್ತ ಬಿ.ಜೆ, ಗಂಗಾಧರ್, ಬೀಡಿ ಕಾರ್ಮಿಕರ ರಾಜ್ಯ ಫೆಡರೇಶನ್ ಸಂಘಟನಾ ಕಾರ್ಯದರ್ಶಿ ಕಾಂ, ದಸ್ತಗೀರ್ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕೆ, ಎ. ಕೃಷ್ಣಸ್ವಾಮಿಯವರು ಮಾತನಾಡಿದರು.

●

ಲಾರಿ ಕಾರ್ಮಿಕರ ಬೇಡಿಕೆ ಈಡೇರಿಕೆ

ಮಹಲಿಂಗೇಶ್ ಟ್ರಾನ್ಸ್‌ಪೋರ್ಟ್‌ನ ಕೆಲಸಗಾರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮಾಲೀಕರಿಗೆ ಡಿಮಾಂಡ್ ನೋಟೀಸ್ ಕೊಟ್ಟಿದ್ದರು. ಅದರಿಂದ ಪ್ರಯೋಜನವಾಗದೆ 31-7-80ರಂದು ಧರಣ ಮುಷ್ಕರದ ನೋಟೀಸ್ ಕೊಟ್ಟಿದ್ದರು. ಮಾಲೀಕರು ಸಂಘದ ಪ್ರತಿನಿಧಿಗಳಾದ ಉಪಾಧ್ಯಕ್ಷ ಕಾಂ. ಅಬ್ದುಲ್ ರಹೀಮ್, ಕಾರ್ಯದರ್ಶಿ ಕಾಂ. ಎಂ, ಶೇಖರ್ ಮತ್ತು ಎಂ. ಡಿ, ನರಸಿಂಹಯ್ಯ, ಟಿ. ಎ. ಜೋಯಪ್ಪ (ಶೀನ) ಹಾಗೂ ಅಬ್ದುಲ್ ನಜೀರ್ ಅವರೊಂದಿಗೆ ಮಾತುಕತೆ ನಡೆಸಿ ಒಪ್ಪಂದಕ್ಕೆ ಬಂದಿದ್ದಾರೆ. ಅದರಂತೆ ಲಾರಿಚಾಲಕನಿಗೆ 325 ರೂ, ಮಾಸಿಕ ವೇತನ, ದಿನದ ಬಾಟ 9ರೂ, ಕ್ಲೀನರ್‌ಗೆ 150ರೂ. ಮಾಸಿಕ ವೇತನ, ದಿನದ ಬಾಟ 6ರೂ, ಎಂದು ನಿಗದಿಯಾಗಿದೆ. ಇದು ಹಿಂದಿನ ಸಂಬಳಕ್ಕಿಂತ ಸಾಕಷ್ಟು ಜಾಸ್ತಿ ಆಗಿದೆ. ಈ ಒಪ್ಪಂದದ ಪ್ರಕಾರ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ, ಒಪ್ಪಂದದಿಂದ ಚಾಲಕರಿಗೆ ಕ್ಲೀನರ್‌ಗಳಿಗೆ ಹೊಸ ಉತ್ಸಾಹ ಮೂಡಿದೆ,

○

ಕಾಂ. ಇ.ಎಂ.ಎಸ್.ರೊಂದಿಗೆ ಒಂದು ವಿಶೇಷ ಸಂದರ್ಶನ

ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರು ತಮ್ಮ ಅಸ್ವಾಸ್ಥ್ಯಕ್ಕೆ ಚಿಕಿತ್ಸೆ ಪಡೆಯಲು ಕಳೆದ ಜೂನ್ 18ರಂದು ಮಣಿಪಾಲಕ್ಕೆ ಬಂದಿದ್ದು ಜುಲೈ 19ರಂದು ಸಂಪೂರ್ಣ ಗುಣಮುಖರಾಗಿ ತಿರುವನಂತಪುರಕ್ಕೆ ಮರಳಿದರು. ಅವರು ಹೊರಟು ಹೋಗುವ ಮುಂಚಿನ ದಿನ ತಾ. 18ರಂದು ಸಂಜೆ ಎಡಪಂಥೀಯ ರಾಜಕೀಯದಲ್ಲಿ ಆಸಕ್ತಿ ಮತ್ತು ಕುತೂಹಲ ಇರುವ ಉಡುಪಿ ಮತ್ತು ಆಸುಪಾಸಿನ ಕಾರ್ಮಿಕ, ಯುವಜನ, ಸಾಂಸ್ಕೃತಿಕ ಸಂಘಟನೆಗಳ ಕೆಲವು ಕಾರ್ಯಕರ್ತರಿಗೆ ಒಂದು ವಿಶೇಷ ಸಂದರ್ಶನ ನೀಡಿದರು. ಸಂದರ್ಶನದಲ್ಲಿ ಪ್ರಸಕ್ತ ವಿಷಯಗಳ ಕುರಿತಾಗಿ ಎತ್ತಿದ ಕೆಲವು ಪ್ರಶ್ನೆಗಳನ್ನು ಕಾಂ. ಇ. ಎಂ. ಎಸ್. ಉತ್ತರಿಸಿದರು. ಆ ಪ್ರಶ್ನೋತ್ತರದ ವರದಿಯನ್ನು ಇಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ.

ಪ್ರಶ್ನೆ : ಎಡಪಂಥೀಯ ಆಂದೋಳನವು ಕೇರಳ, ಪ. ಬಂಗಾಳ, ತ್ರಿಪುರಾ ರಾಜ್ಯಗಳನ್ನು ಬಿಟ್ಟು ದೇಶದ ಉಳಿದೆಡೆಗಳಲ್ಲಿ ದುರ್ಬಲವಾಗಿರುವುದೇಕೆ ?

ಉತ್ತರ : ಇಂತಹ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಲ್ಲ. ಕಾರಣ ಇದೊಂದು ಸಾಮಾಜಿಕ ವಿದ್ಯಾಮಾನ. ಸಮಾಜ ವಿಜ್ಞಾನಗಳಿಗೂ ನೈಸರ್ಗಿಕ ವಿಜ್ಞಾನಗಳಿಗೂ ಮಹತ್ತರವಾದ ವ್ಯತ್ಯಾಸಗಳಿವೆ. ನೈಸರ್ಗಿಕ ವಿದ್ಯಾಮಾನಗಳ ಕಾರ್ಯ-ಕಾರಣಗಳನ್ನು ನೇರವಾಗಿ ಸ್ಪಷ್ಟವಾಗಿ ಗುರುತಿಸಬಹುದು. ಆದರೆ, ಸಾಮಾಜಿಕ ವಿದ್ಯಾಮಾನಗಳು ಅಷ್ಟು ಸುಲಭವಾಗಿ ವಿಶ್ಲೇಷಣೆಗೆ ಸಿಲುಕುವುದಿಲ್ಲ. ಮಾರ್ಕ್ಸ್ ಮತ್ತು ಏಂಗಲ್ಸ್‌ರಿಗೆ ಜನ್ಮವಿತ್ತ ಜರ್ಮನಿಯಲ್ಲಿಯೇ ಇಂದು ಎಡಪಂಥೀಯ ಆಂದೋಳನವು ಪ್ರಬಲವಾಗಿಲ್ಲ ಯಾಕೆ? ಪೂರ್ವ ಜರ್ಮನಿಯೇನೋ ಕೆಂಪು ಸೇನೆಯ ಸಹಾಯದಿಂದ ಬಂಡವಾಳಶಾಹಿ ಆಳ್ವಿಕೆಯಿಂದ ಸ್ವತಂತ್ರಗೊಂಡಿತು. ಆದರೆ, ಪ. ಜರ್ಮನಿಯು ಇನ್ನೂ ಪ್ರಬಲವಾದ ಬಂಡವಾಳಶಾಹಿ ರಾಷ್ಟ್ರವಾಗಿಯೇ ಉಳಿದಿದೆ. ನಮ್ಮ ದೇಶದಲ್ಲಿಯೇ 1940ರ ದಶಕದಲ್ಲಿ ಜಮೀನುದಾರರ ವಿರುದ್ಧ ರೈತರು ಸಶಸ್ತ್ರ ದಂಗೆ ಎದ್ದ ಆಂಧ್ರಪ್ರದೇಶದಲ್ಲಿ ಈಗ ಎಡಪಂಥೀಯ ಆಂದೋಳನವು ದುರ್ಬಲವಾಗಿರುವುದೇಕೆ ? 'ತೆಲಂಗಾಣ ಹೋರಾಟ' ಎಂದರೆ ಹಳೆಯ ತಲೆಮಾರಿನವರಿಗೆ ರೈತರ ಕ್ರಾಂತಿಕಾರಕ ಹೋರಾಟ ಎಂದು ನೆನಪಿಗೆ ಬರುವುದಾದರೂ, ಈಗಿನ ತಲೆಮಾರಿನವರಿಗೆ ಆ ರಾಜ್ಯದಲ್ಲಿ ಸ್ವಾತಂತ್ರ್ಯೋತ್ತರದಲ್ಲಿ ನಡೆದ ಪ್ರಾದೇಶಿಕ, ಆಕ್ರಮಣಶೀಲ ಭಾಷಾ ಚಳವಳದ ನೆನಪಷ್ಟೇ ಬರುವುದೇಕೆ? ಇವೆಲ್ಲವುಗಳಿಗೂ ಚಾರಿತ್ರಿಕ ಕಾರಣಗಳಿವೆ. ಆದರೆ, ಅವುಗಳು ಸರಳವಾದವುಗಳಲ್ಲ, ಬಹಳ ಕ್ಲಿಷ್ಟವಾದವುಗಳು.

ಉದಾಹರಣೆಗೆ, ಕರ್ನಾಟಕವನ್ನೇ ತೆಗೆದುಕೊಳ್ಳಿ. ಈ ರಾಜ್ಯದಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೊಮ್ಮೆ ಪ್ರಬಲವಾದ ಕಾರ್ಮಿಕ ಸಂಘಟನೆ ಮತ್ತು ಅಲ್ಲಲ್ಲಿ ರೈತರ ಸಂಘಟನೆ ಇದ್ದು ಸಾಕಷ್ಟು ದೊಡ್ಡ ಎಡಪಂಥೀಯ ಆಂದೋಳನವಿತ್ತು. ಆದರೆ, ಆಗ ಆಂದೋಳನದ ಕೆಲವು ಮುಂದಾಳುಗಳಿಗೆ ಸರಿಯಾದ ಸೈದ್ಧಾಂತಿಕ ಪ್ರಜ್ಞೆ ಇರಲಿಲ್ಲ. ಪರಿಣಾಮವಾಗಿ, ಸಂಘಟಿತ ಕಾರ್ಮಿಕರಿಗೂ ರೈತರಿಗೂ 'ದುಡಿಯುವ ವರ್ಗ'ದ ರಾಜಕೀಯ ಹಾಗೂ ಸೈದ್ಧಾಂತಿಕ ವಿಚಾರಗಳನ್ನು ಸಾಕಷ್ಟು ತಿಳಿಸಲಿಲ್ಲ. ಆದರೆ, ಈಗ ಈ ಪ್ರದೇಶದಲ್ಲಿ ವಿದ್ಯಾವಂತವರ್ಗದ ಜನರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಎಡಪಂಥೀಯ ಆಂದೋಳನದತ್ತ ಆಕರ್ಷಿತರಾಗುತ್ತಿರುವುದರಿಂದ, ಜನಸಾಮಾನ್ಯರಿಗೆ 'ದುಡಿಯುವ ವರ್ಗದ' ಸೈದ್ಧಾಂತಿಕ ವಿಷಯಗಳನ್ನು ಮುಟ್ಟಿಸಲು ಅವರು ಸಹಕರಿಸುವ ಮೂಲಕ ಹಿಂದಿನ ಕೊರತೆಯನ್ನು ನೀಗಿಸಬಹುದು.

ಭಾರತದಲ್ಲಿ ಎಡಪಂಥೀಯ ಆಂದೋಳನವು ಮೂರೇ ರಾಜ್ಯಗಳಲ್ಲಿ ಪ್ರಬಲವಾಗಿದೆ ಎಂಬ ಹೇಳಿಕೆಯು ಸರಿಯಲ್ಲ. ಒಂದು ಆಂದೋಳನದ ಪ್ರಗತಿಯನ್ನು ಕೇವಲ ಲೋಕಸಭಾ ಮತ್ತು ವಿಧಾನಸಭಾ ಸದಸ್ಯರ ಸಂಖ್ಯೆಗಳಿಂದ ಅಳೆಯಲು ಬರುವುದಿಲ್ಲ. ಅದು ವಿವಿಧ ಕ್ಷೇತ್ರಗಳಲ್ಲಿ ಎಷ್ಟು ಜನಪ್ರಿಯವಾಗಿದೆ ಎಂದು ಪರಿಶೀಲಿಸಬೇಕು. ಉದಾಹರಣೆಗೆ, ಉ. ಪ್ರದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇತ್ತೀಚಿನ ವರ್ಷಗಳಲ್ಲಿ ಲೋಕಸಭೆಯಲ್ಲಾಗಲೀ ವಿಧಾನಸಭೆಯಲ್ಲಾಗಲೀ ಒಂದೇ ಒಂದು ಸ್ಥಾನಗಳಿಸಲು ಅಸಮರ್ಥವಾಗಿದ್ದರೂ, ಅದರ ವಿದ್ಯಾರ್ಥಿ ಸಂಘಟನೆಯು ಆ ರಾಜ್ಯದ 3–4 ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ ಮಂಡಳಿಗಳಲ್ಲಿ ಬಹುಮತ ಅಥವಾ ಬಹುಮತಕ್ಕೆ ಸಮೀಪವಿರುವಷ್ಟು ಸ್ಥಾನಗಳನ್ನು ಗಳಿಸಿದೆ. ಇಂದು ಹಿಂದೀ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿಂದಿ ವಾರಪತ್ರಿಕೆಯು ಅತ್ಯಂತ ಜನಪ್ರಿಯ ಪತ್ರಿಕೆಯಾಗಿದೆ. ಅದರ ಪ್ರಕಾಶನದ ವೆಚ್ಚವು ಪಕ್ಷದ ಇಂಗ್ಲೀಷ್ ವಾರಪತ್ರಿಕೆಯಾದ 'ಪೀಪಲ್ಸ್ ಡೆಮಾಕ್ರಸಿ'ಯಷ್ಟೇ ಸಮತೋಲನದಲ್ಲಿದೆ. ಇತರ ರಾಜ್ಯಗಳಲ್ಲಿಯೂ, ಮುಖ್ಯವಾಗಿ ಪಂಜಾಬ್, ತಮಿಳುನಾಡು, ಸ್ವಲ್ಪಮಟ್ಟಿಗೆ ಬಿಹಾರ ರಾಜ್ಯಗಳಲ್ಲಿ ಜನರು ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳನ್ನೇ, ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೇ ಪರ್ಯಾಯ ಶಕ್ತಿಯನ್ನಾಗಿ ಸ್ಪಷ್ಟವಾಗಿ ಎದುರು ನೋಡುತ್ತಿದ್ದಾರೆ.

1970ರ ಮೊದಲಲ್ಲಿ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿಯು 'ಮಹಾ ಮೈತ್ರಿ'ಯಾಗಿತ್ತು, ನಂತರ ಜೆ. ಪಿ. ಆಂದೋಳನವಾಗಿತ್ತು, ಕೊನೆಯಲ್ಲಿ ಜನತಾಪಕ್ಷವಾಗಿತ್ತು. ಆದರೆ, ಇಂದು ಪುನಃ ಇಂದಿರಾ ಕಾಂಗ್ರೆಸ್ ಪರ್ಯಾಯ ಶಕ್ತಿಯಾಗಿ ಕೇಂದ್ರದಲ್ಲಿಯೂ ಹೆಚ್ಚಿನ ರಾಜ್ಯಗಳಲ್ಲಿಯೂ ಅಧಿಕಾರಕ್ಕೆ ಬಂದಿದೆ. ಆದರೆ, ಮರಳಿ ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್ ಆಂತರಿಕವಾಗಿ ಬೇರೆಬೇರೆ ವರ್ಗಹಿತಾಸಕ್ತಿಗಳನ್ನು ಪ್ರತಿನಿಧಿಸುವ ಹತ್ತುಹಲವು ಗುಂಪುಗಳಾಗಿ ಛಿದ್ರಗೊಂಡಿದೆ. ಅಲ್ಲದೆ, ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ಸರಕಾರಗಳ ಸಾಧನೆಗಳನ್ನು ಇತರ ರಾಜ್ಯಗಳ ಜನರು ಆಸಕ್ತಿಯಿಂದ ಗಮನಿಸುತ್ತಿದ್ದು ಎಡ ಮತ್ತು ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳನ್ನು ಕಾಂಗ್ರೆಸ್ಸಿಗೆ ಪರ್ಯಾಯ ಶಕ್ತಿಯಾಗಿ ಬೆಳೆಯುವುದನ್ನು ಎದುರು ನೋಡುತ್ತಿದ್ದಾರೆ.

ಆದರೂ, ರಾಜಕೀಯವು "ಸಾಧ್ಯತೆಯ ಕುರಿತಾದ ಒಂದು ಕಲೆ" (Politics is an art of the possible) ಒಂದು ನಿರ್ದಿಷ್ಟ ಸಂದರ್ಭದಲ್ಲಿ ಯಾವುದು ಸಾಧ್ಯ ಎಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಇಂದಿರಾ ಕಾಂಗ್ರೆಸ್ ಸೋತ ಮೇಲೆ 'ಸಂಜಯಗಾಂಧಿ'ಯ ರಾಜಕೀಯ ವಿದ್ಯಾಮಾನವು ಬಲಗೊಳ್ಳುತ್ತಿದೆ; ಅದರೊಂದಿಗೇ, ಆರ್. ಎಸ್. ಎಸ್. ಕೂಡಾ ಪ್ರಬಲವಾಗುತ್ತಿದೆ. ಇಷ್ಟಾದರೂ ಸದ್ಯದ ಪರಿಸ್ಥಿತಿಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಹಲವಾರು ಸಾಧ್ಯತೆಗಳಿರುವ ಪ್ರಸಕ್ತ ಪರಿಸ್ಥಿತಿಯಲ್ಲಿ ಕ್ರಾಂತಿಕಾರರಾದ ನಾವು 'ದುಡಿಯುವ ವರ್ಗ'ದ ಆಂದೋಳನವು ಪ್ರಬಲವಾಗುವ ಸಾಧ್ಯತೆಯನ್ನು ಕಾಣುತ್ತೇವೆ. ಅಂತಹ 'ಸಾಧ್ಯತೆ'ಯನ್ನು 'ಸಾಧನೆ'ಯನ್ನಾಗಿಸುವುದು ನಮ್ಮ ಕೈಯಲ್ಲಿದೆ.

ಪ್ರಶ್ನೆ : ಕರ್ನಾಟಕದಲ್ಲಿ ಎಡಪಂಥೀಯ ಆಂದೋಳನವು ಬಲಗೊಳ್ಳುವ ಸಾಧ್ಯತೆಗಳೇನು :

ಉತ್ತರ : ಈ ರಾಜ್ಯದಲ್ಲಿ ಎಡಪಂಥೀಯ ಆಂದೋಳನವು ಬಲಗೊಳ್ಳಲು ಒಳ್ಳೆಯ ಅವಕಾಶಗಳಿವೆ. ಆದರೆ ಈ ಸಂದರ್ಭದಲ್ಲಿ ಎರಡು ಮುಖ್ಯ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಮೊದಲನೆಯದಾಗಿ ಕರ್ನಾಟಕದಲ್ಲಿನ, ಮುಖ್ಯವಾಗಿ ದಕ್ಷಿಣ ಕನ್ನಡ ಮತ್ತು ಮಡಿಕೇರಿ ಪ್ರದೇಶಗಳ ಜನರ 'ರಾಷ್ಟ್ರೀಯತೆ'ಯ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. 'ರಾಷ್ಟ್ರೀಯತೆ' ಎಂದರೆ ಒಂದು ನಿರ್ದಿಷ್ಟ ಪ್ರದೇಶದ ಜನರ ವಿಶಿಷ್ಟವಾದ ಭಾಷೆ, ಸಂಸ್ಕೃತಿ, ಪರಂಪರೆ ಇತ್ಯಾದಿಗಳ ಅರ್ಥದಲ್ಲಿ ಈ ಪ್ರದೇಶಗಳಲ್ಲಿ ಉಪರಾಷ್ಟ್ರೀಯತೆಯುಳ್ಳ 'ಕೊಡಗಿಗರು', 'ಕೊಂಕಣಿಗರು' ಮತ್ತು 'ತುಳುವರು' ಕಾಲಕ್ರಮೇಣದಲ್ಲಿ ರಾಜ್ಯದ ಮುಖ್ಯ ರಾಷ್ಟ್ರೀಯತೆಯುಳ್ಳ ಕನ್ನಡಿಗರೊಂದಿಗೆ ಐಕ್ಯಮತ್ಯ ಹೊಂದುತ್ತಿದ್ದಾರೆ. ಆದರೆ, ಉಪರಾಷ್ಟ್ರೀಯತೆಯುಳ್ಳ ಜನರ ಆಶೋತ್ತರಗಳನ್ನೂ, ಅವರ ರಾಷ್ಟ್ರೀಯತೆಯ ಚಾರಿತ್ರಿಕ ವಿಕಾಸವನ್ನೂ ಆಳವಾಗಿ ಅಭ್ಯಸಿಸಬೇಕು. ಉಪರಾಷ್ಟ್ರೀಯತೆಗಳಲ್ಲಿನ ಪುರೋಗಾಮಿ ಅಂಶಗಳನ್ನು ಸ್ವೀಕರಿಸಿ ಪ್ರತಿಗಾಮಿ ಅಂಶಗಳನ್ನು ತಿರಸ್ಕರಿಸಬೇಕು. ಎಂದಾದರೊಮ್ಮೆ ಯಾರಾದರೂ ಈಗ ಈಶಾನ್ಯ ಭಾರತದಲ್ಲಿ ನಡೆಯುತ್ತಿರುವಂತೆ ಈ ಉಪರಾಷ್ಟ್ರೀಯರ ಹಿತಾಸಕ್ತಿಗಳ ಪರವಾಗಿ ಒಂದು ಚಳವಳವನ್ನೇ ಪ್ರಾರಂಭಿಸಬಹುದು! ಆದುದರಿಂದಲೇ ಮುಖ್ಯ ರಾಷ್ಟ್ರೀಯತೆ ಮತ್ತು ಉಪರಾಷ್ಟ್ರೀಯತೆಗಳುಳ್ಳ ಜನರೊಳಗಿನ ಐಕ್ಯಮತ್ಯದ ಅಗತ್ಯತೆಯನ್ನು ಈ ರಾಜ್ಯದ ದುಡಿಯುವ ವರ್ಗಕ್ಕೆ ನಾವು ಸತತವಾಗಿ ಮನಗಾಣಿಸಿಕೊಡಬೇಕು. ಕಾರಣ, ನಮ್ಮ ದೇಶದಲ್ಲಿ ಒಂದು ರಾಷ್ಟ್ರೀಯತೆಯು (ರಾಜ್ಯದ) ಜನರು ಇನ್ನೊಂದು ರಾಷ್ಟ್ರೀಯತೆಯ ಜನರನ್ನು ಶೋಷಣೆ ಮಾಡುತ್ತಿಲ್ಲ. ಬದಲು, ಶೋಷಣೆಯು ಮೂಲತಃ ಆರ್ಥಿಕವಾದುದು. ದೇಶಾದ್ಯಂತ ಕಾರ್ಮಿಕರನ್ನು ಮತ್ತು ರೈತರನ್ನು ಬಂಡವಾಳಶಾಹಿಗಳೂ ಭೂಮಾಲಕರೂ ಶೋಷಿಸುತ್ತಿದ್ದಾರೆ.

ಉಪರಾಷ್ಟ್ರೀಯತೆವುಳ್ಳ ಜನರ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತ್ಯಾದಿಗಳನ್ನು ರಕ್ಷಣೆಮಾಡುವುದೇ ಅಲ್ಲದೆ, ಅಭಿವೃದ್ಧಿಗೊಳಿಸುವ ಕೆಲಸವೂ ನಡೆಯಬೇಕು. ಈ ಪ್ರದೇಶದಲ್ಲಿ ಸಾಕಷ್ಟು ಬರಹಗಾರರೂ, ಮೇಧಾವಿಗಳೂ ಇರುವುದರಿಂದ ಕರ್ನಾಟಕದಲ್ಲಿ ಮುಖ್ಯವಾಗಿ ದ. ಕನ್ನಡ ಮತ್ತು ಕೊಡಗು ಪ್ರದೇಶಗಳ ಜನರ ರಾಷ್ಟ್ರೀಯತೆಯ ಪ್ರಶ್ನೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಬಹುದು.

ಎರಡನೇಯದಾಗಿ, ಕರ್ನಾಟಕದಲ್ಲಿ 'ಲೋಹಿಯಾವಾದ'ದ ವರ್ಚಸ್ಸನ್ನೂ ನಾವು ಗಮನಿಸಬೇಕು. 'ಲೋಹಿಯಾವಾದ'ದ ಪ್ರಗತಿಶೀಲ ಅಂಶವನ್ನು ನಾವು ಗೌರವಿಸಬೇಕು. ಅದು ಭಾರತದ ಜಾತಿಪದ್ಧತಿಯನ್ನು ಅತ್ಯುಗ್ರವಾಗಿ ವಿರೋಧಿಸುತ್ತದೆ ಆದರೆ, ಹಾಗೆ ಮಾಡುವಾಗ ಜಾತಿಸಮಸ್ಯೆಯನ್ನು ವರ್ಗಸಮಸ್ಯೆಗಿಂತ ಮೊದಲ ಸ್ಥಾನದಲ್ಲಿಡುತ್ತದೆ. ಇದು ಲೋಹಿಯಾವಾದದಲ್ಲಿ ನಾವು ತಿರಸ್ಕರಿಸಬೇಕಾದ ಅಂಶ. ನಾವು ಪ್ರತಿಯೊಂದನ್ನೂ 'ದುಡಿಯುವ ವರ್ಗ'ದ ಐಕ್ಯಮತ್ಯದ ದೃಷ್ಟಿಯಿಂದ ನೋಡಬೇಕು. ಅದಕ್ಕೆ ಜಾತಿಪದ್ಧತಿಯ ವಿರುದ್ಧವಾದ ಹೋರಾಟವೂ ಅತ್ಯಗತ್ಯವಾಗಿದೆ. ಆದರೆ, ಅದು ವರ್ಗಹೋರಾಟಕ್ಕೆ ಪೂರಕವಾಗಿರಬೇಕು. ಹೀಗೆ ಹೇಳುವಾಗ ಲೋಹಿಯಾವಾದಿಗಳು ಮೌನವಾಗಬಹುದು. ಆದರೆ, ಅವರ ಬಾಯಿ ಮುಚ್ಚಿಸುವುದು ನಮ್ಮ ಉದ್ದೇಶವಲ್ಲ. ಅವರಿಗೆ ಈ ವಿಷಯ ಮನವರಿಕೆಮಾಡಿಸಿಕೊಡಬೇಕು. ಕ್ರಾಂತಿಕಾರಿ ಐಕ್ಯತೆ ಬೆಳೆಸುವುದಕ್ಕಾಗಿ ನಾವು ಅವರೊಂದಿಗೆ ಬಲುದೂರ ಹೋಗಬೇಕು. ಅವರು ನಮ್ಮ ಮಿತ್ರರು.

ಪ್ರಶ್ನೆ : ಲೋಕದಳ, ಕಾಂಗ್ರೆಸ್ (ಯು), ಎ. ಐ. ಡಿ. ಎಂ. ಕೆ., ಅಕಾಲಿದಳ, ಮುಂತಾದ ಭಿನ್ನ ಮತೀಯ ಪಕ್ಷಗಳೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮೈತ್ರಿ ಮಾಡಿಕೊಳ್ಳುತ್ತಿರುವುದು ಸಂದರ್ಭಸಾಧಕತನವಲ್ಲವೆ?

ಉತ್ತರ : ಇಂತಹ ಮೈತ್ರಿಯಿಂದಾಗಿ ನಮ್ಮ ಆಂದೋಳನವು ಬಲಗೊಳ್ಳುವುದು ಖಂಡಿತವಾದರೆ, ಇದು ಅನಿವಾರ್ಯ. ಕಿಂಚಿತ್ತಾದರೂ ಸಂದರ್ಭಸಾಧಕತನ ಇಲ್ಲದ ಯಾವುದೇ ರಾಜಕೀಯವಿಲ್ಲ. ರಾಜಕೀಯವು ಶುದ್ಧ ಆದರ್ಶವೇನಲ್ಲ. ಅದು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಕಾರ್ಯಗತಗೊಳಿಸುವ ಆದರ್ಶವಾಗಿರುವುದು. ಉದಾಹರಣೆಗೆ, ಎರಡನೇ ಜಾಗತಿಕ ಯುದ್ಧದಲ್ಲಿ ಸೋವಿಯತ್ ಯೂನಿಯನ್‌ನ ಕಡು ವೈರಿಗಳಾದ ಅಮೇರಿಕ, ಫ್ರಾನ್ಸ್, ಇಂಗ್ಲೇಂಡ್ ದೇಶಗಳು ಜರ್ಮನಿ-ಇಟೆಲಿ-ಜಪಾನ್ ದೇಶಗಳಲ್ಲಿನ ಫ್ಯಾಸಿಸಂನ ವಿರುದ್ಧ ಹೋರಾಡಲು ಅಂತಿಮವಾಗಿ ಸೋವಿಯತ್ ಯೂನಿಯನ್‌ನೊಂದಿಗೇ ಮೈತ್ರಿ ಮಾಡಿಕೊಳ್ಳಬೇಕಾಯಿತು.

ಸದ್ಯ, ಎಡಪಕ್ಷಗಳೊಳಗೇ ಕೆಲವು ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ, ಸಿ.ಪಿ.ಐ., ಮತ್ತು ಸಿ.ಪಿ.ಐ. (ಎಂ) ಪಕ್ಷಗಳೊಳಗೆ ಭಾರತವು ಚೀನಾದೊಡನೆ ತನ್ನ ಸಂಬಂಧವನ್ನು ಮತ್ತೆ ಸ್ಥಾಪಿಸುವ ಕುರಿತು ಭಿನ್ನಾಭಿಪ್ರಾಯಗಳಿವೆ. ಭಾರತವು ಚೀನಾದೊಂದಿಗೆ ತನ್ನ ಸಂಬಂಧವನ್ನು ಊರ್ಜಿತಗೊಳಿಸಿದರೆ ಸೋವಿಯತ್ ಯೂನಿಯನ್‌ನೊಂದಿಗೆ ಭಾರತಕ್ಕಿರುವ ಸಂಬಂಧದಲ್ಲಿ ದುಷ್ಪರಿಣಾಮವಾಗಬಹುದೆಂದು ಸಿ. ಪಿ. ಐ. ಭಯಪಡುವುದು. ಈ ವಿಷಯ 'ನ್ಯೂಏಜ್' ನಲ್ಲಿ ಭೂಪೇಶಗುಪ್ತರ ಲೇಖನದಿಂದ ಸ್ಪಷ್ಟವಾಗುವುದು. ಹಾಗಾದರೆ, ಭಾರತ ಅಮೇರಿಕದ ಸಂಯುಕ್ತ

ಸಂಸ್ಥಾನಗಳೊಂದಿಗೆ ನಿಕಟ ಸಂಬಂಧ ಹೊಂದಿರುವುದಾದರೂ ಸೋವಿಯತ್ ಯೂನಿಯನ್‌ನೊಂದಿಗೆ ಭಾರತದ ಸಂಬಂಧ ಹೇಗೆ ಇನ್ನೂ ಉಳಿದಿದೆ ಮತ್ತು ಬೆಳೆಯುತ್ತಿದೆ ಎಂದು ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಸವಾಲು ಹಾಕಿದ್ದಾರೆ. ಆದಾಗ್ಯೂ, ಸದ್ಯದ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿ-ಭೂಮಾಲೀಕ ಪರವಾದಿರುವ ಲೋಕದಳ, ಕಾಂಗ್ರೆಸ್ (ಯು), ಜನತಾ ಮುಂತಾದ ವಿರೋಧಪಕ್ಷಗಳು ತಮ್ಮ ತಮ್ಮೊಳಗೇ ಹೊಡೆದಾಡಿಕೊಂಡು ವಿನಾಶದತ್ತ ಸಾಗುತ್ತಿರುವಾಗ, ಎಡ ಪಕ್ಷಗಳು ಮಾತ್ರ ದೇಶದ ಮುಖ್ಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಕುರಿತು ಸರ್ವಸಾಮಾನ್ಯವಾಗಿ ಐಕ್ಯಮತ್ಯ ಹೊಂದಿವೆ. ಬಂಡವಾಳಶಾಹಿ-ಭೂಮಾಲೀಕ ಪರವಾದ ವಿರೋಧ ಪಕ್ಷಗಳು ಎಡ ಮತ್ತು ಪ್ರಜಾಪ್ರಭುತ್ವವಾದಿ ಸಂಯುಕ್ತ ರಂಗಕ್ಕೆ ಸೇರಲು ಇಚ್ಛಿಸುವುದಾದರೂ, ಅವುಗಳು ಇನ್ನೂ ಹಿಂಜರಿಯುತ್ತಿವೆ. ಆದುದರಿಂದ, ಎಡ ಮತ್ತು ಪ್ರಜಾಪ್ರಭುತ್ವವಾದಿ ಸಂಯುಕ್ತರಂಗವನ್ನು ಬೆಳೆಸಲು ಭವಿಷ್ಯದಲ್ಲಿ ನಿರಂತರ ಪ್ರಯತ್ನಗಳು ನಡೆಯಬೇಕಾಗಿದೆ.

ಪ್ರಶ್ನೆ: ಆರ್. ಎಸ್. ಎಸ್. ಮತ್ತು ಕಾಂಗ್ರೆಸ್ (ಐ) ಇವೆರಡರಲ್ಲಿ ಯಾವುದು ಹೆಚ್ಚು ಅಪಾಯಕಾರಿ :

ಉತ್ತರ: ಪ್ಲೇಗ್ ಮತ್ತು ಕಾಲರಾಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ ಎಂದು ಕೇಳಿದರೆ ಹೇಗೆ? ಎರಡೂ ಅಪಾಯಕಾರಿ! ಇಲ್ಲಿಯೂ ನಾವು ಗಮನಿಸಬೇಕಾದುದೇನೆಂದರೆ, ನಮ್ಮ ದೇಶದಲ್ಲಿ ದುಡಿಯುವ ವರ್ಗದ ಆಂದೋಳನವು ಈ ಎರಡು ಶಕ್ತಿಗಳಿಂದಾಗಿ ಹೇಗೆ ಕುಂಠಿತಗೊಳ್ಳುವುದು ಎಂದು. ಕಾಂಗ್ರೆಸ್ (ಐ) ಬಂಡವಾಳಶಾಹಿ-ಭೂಮಾಲೀಕ ವರ್ಗದ ಸರ್ವಾಧಿಕಾರಿ ಶಕ್ತಿಗಳನ್ನು ಪ್ರತಿನಿಧಿಸುವುದು ಅದು ಪ್ರಜಾಪ್ರಭುತ್ವದ ವಿರೋಧಿ ಮತ್ತು ಕಮ್ಯುನಿಸ್ಟ್ ವಿರೋಧಿ.

ಆರ್. ಎಸ್. ಎಸ್. ಪ್ರತಿಗಾಮಿ ಹಾಗೂ ಮತೀಯ ಸಂಘಟನೆ. ಅದು ಆಧುನೀಕತೆಗೆ, ಕಮ್ಯುನಿಸಂಗೆ ವಿರೋಧಿ, ಅದು ಧಾರ್ಮಿಕ ಅಲ್ಪಮತೀಯರಿಗೆ ಮಾತ್ರ ವಿರುದ್ಧವಲ್ಲ, ಹಿಂದುಳಿದ ಜಾತಿಗಳಿಗೂ ಪಂಗಡಗಳಿಗೂ ವಿರುದ್ಧವಾಗಿದೆ. ಆರ್. ಎಸ್. ಎಸ್, ಹಿಂದೂ ರಾಷ್ಟ್ರವನ್ನು ಪ್ರತಿಪಾದಿಸುತ್ತದೆ. ಹಿಂದೂ ರಾಷ್ಟ್ರದ ಕಲ್ಪನೆಯು ಜಾತಿ ಪದ್ಧತಿಯ, ವರ್ಣಾಶ್ರಮ ಪದ್ಧತಿಯ ಆಧಾರದಲ್ಲಿದ್ದ ಹಳೆಯ, ನಶಿಸಿಹೋದ ಸಮಾಜ ಪದ್ಧತಿಯ ಪುನರುಜ್ಜೀವನಗೊಳಿಸುವುದಾಗಿದೆ. ವರ್ಣಾಶ್ರಮ ಧರ್ಮದಂತೆ, ಪ್ರತಿಯೊಬ್ಬನೂ ಅವನವನ ಜಾತಿ ಕಸುಬಿಗೇ ಅಂಟಿಕೊಂಡೇ ಬೇಕು. ಜಾತಿ ಪದ್ಧತಿಯನ್ನು ಪುನರುಜ್ಜೀವನಗೊಳಿಸುವುದರಿಂದ ಮತ್ತು ಅದನ್ನು ಮುಂದುವರಿಸುವುದರಿಂದ 'ದುಡಿಯುವವರ್ಗ'ದ ಆಂದೋಳನಕ್ಕೆ ಅಡ್ಡಿ ಉಂಟಾಗುವುದು.

ಈ ಸಂದರ್ಭದಲ್ಲಿ, ಲೋಹಿಯಾವಾದಕ್ಕೂ ಆರ್. ಎಸ್. ಎಸ್. ಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಲೋಹಿಯಾವಾದವು ಭಾರತದ ಜಾತಿಪದ್ಧತಿಯನ್ನು ಉಗ್ರವಾಗಿ ವಿರೋಧಿಸುವುದು. ಆದರೆ, ಜಾತಿಪದ್ಧತಿಯ ವಿರುದ್ಧವಾದ ಹೋರಾಟಕ್ಕೆ ವರ್ಗ ಹೋರಾಟಕ್ಕಿಂತ ಮೊದಲ ಸ್ಥಾನ ಕೊಡುವುದು. ಇಷ್ಟರ ಮಟ್ಟಿಗೆ 'ದುಡಿಯುವ ವರ್ಗ'ದ ಐಕ್ಯ ಮತ್ತು ಅದರ ಕ್ರಾಂತಿಕಾರಕ ಸಿದ್ಧಾಂತವನ್ನು ಪ್ರಸಾರ ಮಾಡುವ ಕಾರ್ಯ ಸ್ವಲ್ಪ ದುರ್ಬಲವಾಗಬಹುದು ಆದರೂ ಲೋಹಿಯಾವಾದಿಗಳು ನಮ್ಮ ಮಿತ್ರರು. ಕಾರಣ, ಅವರು ಜಾತಿಪದ್ಧತಿಯನ್ನು ತೀವ್ರವಾಗಿ ವಿರೋಧಿಸುವಷ್ಟರಮಟ್ಟಿಗೆ 'ದುಡಿಯುವ ವರ್ಗ'ದ ಹೋರಾಟಕ್ಕೆ ಸಹಾಯವಾಗುವುದು. ಇದು ಅಂತರಾಷ್ಟ್ರೀಯ ವಿಚಾರಗಳಿಗೂ ಅನ್ವಯಿಸುವುದು.

ಜಾರ್ಜ್‌ಫರ್ನಾಂಡೀಸರ ರಾಜಕೀಯ "Socialist International"ನ ರಾಜಕೀಯವೆಂದು ನಮಗೆ ಗೊತ್ತಿದೆ. ಅದು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಳನಕ್ಕೆ ಯಾವತ್ತೂ ವಿರುದ್ಧವಾಗಿದೆ ಎಂದೂ ನಮಗೆ ಗೊತ್ತಿದೆ. ಆದರೆ, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಳನವು ಅಂತರಾಷ್ಟ್ರೀಯ ಬಂಡವಾಳಶಾಹಿಯ (ಸಾಮ್ರಾಜ್ಯಶಾಹಿ) ವಿರುದ್ಧವಾಗಿ ಸಂಯುಕ್ತ ಹೋರಾಟ ಹೂಡಲು "Socialist International" ಮೈತ್ರಿಯನ್ನು ಪಡೆಯಲು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ.

ಆರ್. ಎಸ್. ಎಸ್. ನಮ್ಮನ್ನು 3000 ವರ್ಷಗಳಷ್ಟು ಹಿಂದಕ್ಕೆ ಒಯ್ಯುವುದು! ಆದರೆ, ಯಾರೊಬ್ಬನೂ ಅವನು ಹುಟ್ಟಿದ ವರ್ಷದಷ್ಟು ಹಿಂದಕ್ಕೆ ಸರಿಯಲು ಇಷ್ಟಪಡುವುದಿಲ್ಲ! ಆರ್.ಎಸ್.ಎಸ್. ಮತ್ತು ಕಾಂಗ್ರೆಸ್ (ಐ) ಇವೆರಡು ಎಷ್ಟೇ ಪರಸ್ಪರ ವೈರ ಸಾಧಿಸುತ್ತಿರಲಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಆಂದೋಳನವನ್ನು ಎದುರಿಸುವಾಗ ಈ ಎರಡೂ ಶಕ್ತಿಗಳೂ ಒಂದಾಗುವವು! ಉದಾಹರಣೆಗೆ, ಕೇರಳ ಮತ್ತು ಉತ್ತರ ಭಾರತದಲ್ಲಿ ಕಳೆದ ಚುನಾವಣೆಗಳಲ್ಲಿ ಆರ್. ಎಸ್. ಎಸ್. ಮತ್ತು ಕಾಂಗ್ರೆಸ್ (ಐ) ಒಟ್ಟಿಗೇ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಅಭ್ಯರ್ಥಿಗಳ ವಿರುದ್ಧ ಹೋರಾಡಿವೆ. ಜಗಜೀವನರಾಂ ಅವರೇ ದೂರಿಕೊಂಡಂತೆ, ಆರ್.ಎಸ್.ಎಸ್. ಚುನಾವಣೆಯಲ್ಲಿ ಜನತಾಪಕ್ಷದ ಹಿಂದುಳಿದ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ ತನ್ನ ಬೆಂಬಲ ನೀಡದೆ, ಕಾಂಗ್ರೆಸ್ (ಐ) ಅಭ್ಯರ್ಥಿಗಳೇ ಅಂತಹ ಕ್ಷೇತ್ರಗಳಲ್ಲಿ ಜಯಗಳಿಸಲು ಸಹಕರಿಸಿದೆ. ಆರ್. ಎಸ್. ಎಸ್. ಮತ್ತು ಕಾಂಗ್ರೆಸ್(ಐ) ಒಂದಕ್ಕೊಂದು ಪೂರಕವಾದಿವೆಯೇ ಹೊರತು ವಿರುದ್ಧವಾದಿಲ್ಲ. ಇವೆರಡರಲ್ಲಿ ಆರಿಸಲು ಏನೂ ಇಲ್ಲ. ಕಾಂಗ್ರೆಸ್ (ಐ) ಸೋತರೆ ಆರ್.ಎಸ್.ಎಸ್. ಗೆಲ್ಲುವುದು. ಆರ್.ಎಸ್.ಎಸ್. ಸೋತರೆ ಕಾಂಗ್ರೆಸ್(ಐ) ಗೆಲ್ಲುವುದು, ಅಷ್ಟೆ ಆರ್.ಎಸ್.ಎಸ್. ಮತೀಯ ಗಲಭೆಗಳನ್ನೆಬ್ಬಿಸುವುದಲ್ಲದೆ, ರಾಜಾರಾಮ್ ಮೋಹನ್‌ರಾಯ್ ಕಾಲದಿಂದ ಭಾರತದ ಜನತೆ ಬೆಳೆಸಿಕೊಂಡು ಬಂದ ಆಧುನಿಕ ಮನೋಧರ್ಮ ಮತ್ತು ಉದಾರ ನೀತಿ ಇವೆಲ್ಲವುಗಳನ್ನೂ ಹಾಳುಗೆಡಹುವುದು.

ಪ್ರಶ್ನೆ : ಹಾಗಾದರೆ, ಆರ್. ಎಸ್.ಎಸ್. ಹಿಂದುಳಿದ ಜಾತಿ ಮತ್ತು ಪಂಗಡಗಳಲ್ಲಿಯೂ ತನ್ನ ವರ್ಚಸ್ಸನ್ನು ಇತ್ತೀಚೆಗೆ ಬೆಳೆಸಿಕೊಳ್ಳುತ್ತಿರುವುದು ಹೇಗೆ?

ಉತ್ತರ : ಜನರು ತಾವು ಹಿಂದುಳಿದಿರುವ ಕಾರಣದಿಂದಲೇ ತಮ್ಮಷ್ಟಕ್ಕೆ ತಾವೇ ಎಡ ಪಂಥೀಯ ಆಂದೋಳನವನ್ನು ಅಂಗೀಕರಿಸುವುದಿಲ್ಲ. ಅತ್ಯಂತ ಮುಂದುವರಿದ ಸೈದ್ಧಾಂತಿಕ ವಿಚಾರಗಳನ್ನು ಅತ್ಯಂತ ಹಿಂದುಳಿದ ಜಾತಿ, ವರ್ಗಗಳಿಗೆ ತಲುಪಿಸುವುದೇ ನಮ್ಮ ಹೊಣೆಗಾರಿಕೆ, ಸೈದ್ಧಾಂತಿಕ ವಿಚಾರಗಳನ್ನು ಜನರ ದೈನಂದಿನ ಜೀವನ ಮತ್ತು ಹೋರಾಟಗಳಿಗೆ ಅನ್ವಯಿಸಿ ಹೇಳಿದರೆ, ಪ್ರತಿಯೊಬ್ಬ ಕಾರ್ಮಿಕನೂ, ರೈತನೂ ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲನು. ಉದಾಹರಣೆಗೆ, ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸಂಘಟಿತ ಹೋರಾಟ ನಡೆಸುತ್ತಿರುವಾಗ ಹಿಂದು ಮುಸ್ಲಿಂ ಮತೀಯ ವೈರಭಾವನೆಯನ್ನು ಅವರಲ್ಲಿ ಬಿತ್ತಿ ಅವರ ಐಕ್ಯತೆಯನ್ನು ಯಾರಾದರೂ ಮುರಿಯಲು ಪ್ರಯತ್ನಿಸಿದರೆ, ಅವರು ಮಾಲಕರ, ಸರಕಾರದ ಏಜಂಟರೆಂದು ಕಾರ್ಮಿಕರು ಸುಲಭವಾಗಿ ತಿಳಿಯುವರು. ಕಾರ್ಮಿಕ ಸಂಘಟನೆಗೆ ಮತೀಯ ಭೇದಭಾವ ಇರಕೂಡದೆಂದು ಅವರು ತಿಳಿಯುವರು. ಆದರೆ, ನಾವು ಜನರೊಂದಿಗೆ ಬೆರೆತು ಕೆಲಸ ಮಾಡಬೇಕು. ಅದೊಂದು ಕಲೆ ಹಾಗೂ ನಿಷ್ಠೆ ರಾಜಕೀಯವು ಸಾಧ್ಯತೆಯ ಕುರಿತಾದ ಒಂದು ಕಲೆ. ಖಂಡಿತವಾಗಿಯೂ ಇದು ಬಹಳ ಕಷ್ಟ. ಆದರೆ, ಕ್ರಾಂತಿಯು ಸುಲಭಸಾಧ್ಯವಲ್ಲ!

ಪ್ರಶ್ನೆ : ಕೇಂದ್ರಸರಕಾರವು ಯಾವುದರೂ ಏನಾದರೂ ನೆವದಿಂದ ವಿರೋಧ ಪಕ್ಷಗಳ ರಾಜ್ಯ ಸರಕಾರಗಳನ್ನು ಪದಚ್ಯುತಗೊಳಿಸಬಹುದಾದುದರಿಂದ, ದೇಶದ ಇತರ ರಾಜ್ಯಗಳಲ್ಲಿಯೂ ಎಡ ರಂಗ ಸರಕಾರಗಳನ್ನು ರಚಿಸುವ ಸಾಧ್ಯತೆ ಆಗುವವರೆಗೆ, ಕೇರಳ, ಪ. ಬಂಗಾಳ ಮತ್ತು ತ್ರಿಪುರಾದಂತಹ ಕೆಲವೇ ರಾಜ್ಯಗಳಲ್ಲಿ ನಾವು ಅಧಿಕಾರಕ್ಕೆ ಬರುವುದು ಸಮಂಜಸವೆ?

ಉತ್ತರ : ನಾವು ಕೇರಳ, ಪ. ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಅಧಿಕಾರದಲ್ಲಿಲ್ಲ, ಕೇವಲ ಸ್ಥಾನದಲ್ಲಿದ್ದೇವೆ! (We are not in power, but only in office!) ಅಧಿಕಾರವಿರುವುದು ದೆಹಲಿಯಲ್ಲಿ ಎಂದು ನಮಗೆ ಚೆನ್ನಾಗಿ ಗೊತ್ತು. ಸದ್ಯದ ವ್ಯವಸ್ಥೆಯಲ್ಲಿ ನಾವು ರಾಜ್ಯಗಳಲ್ಲಿ ಸೀಮಿತ ಅಧಿಕಾರದ ಸ್ಥಾನ ಪಡೆಯುವುದರ ಇತಿಮಿತಿಗಳನ್ನು ಜನರಿಗೆ ಹೇಳುತ್ತೇವೆ. ಅದರೊಂದಿಗೇ ನಾವು 'ಸ್ಥಾನ' ಪಡೆದಿರುವ ರಾಜ್ಯಗಳಲ್ಲಿ ಜನರ ಹೋರಾಟಕ್ಕೆ ಸಹಕರಿಸುತ್ತೇವೆ, ಅವರಿಗೆ ಆದಷ್ಟು ಪರಿಹಾರ ಒದಗಿಸಿಕೊಡುತ್ತೇವೆ. ಈ ಮೂಲಕ, ನಮ್ಮ ಅಂತಿಮ ಗುರಿಯಾದ ಜನತಾ ಪ್ರಜಾಪ್ರಭುತ್ವವಾದಿ ಕ್ರಾಂತಿಯ ನಂತರ ಕೈಕೊಳ್ಳಬಹುದಾದ ಕ್ರಾಂತಿಕಾರಕ ಬದಲಾವಣೆಯ ಕುರಿತು ನಾವು ಜನರಿಗೆ, ದುಡಿಯುವ ವರ್ಗಕ್ಕೆ ತಿಳಿಯಪಡಿಸುತ್ತೇವೆ. ಆ ಗುರಿ ಮುಟ್ಟಲು ನಾವು ಜನರನ್ನು ಅಣಿಗೊಳಿಸುತ್ತೇವೆ.

ಬಂಡವಾಳಶಾಹಿ-ಭೂಮಾಲೀಕಪರವಾದ ಕೇಂದ್ರ ಸರಕಾರವು ಎಡ ಹಾಗೂ ಪ್ರಜಾಪ್ರಭುತ್ವವಾದಿ ಸಂಯುಕ್ತರಂಗ ಸರಕಾರಗಳ ಇರುವಿಕೆಗೆ ಸದಾ ಬೆದರಿಕೆ ಹಾಕುತ್ತಿರುವುದೆಂಬ ಕಾರಣದಿಂದ ನಾವು ಸಾಧ್ಯವಾದಷ್ಟು ರಾಜ್ಯಗಳಲ್ಲಿ ಸರಕಾರ ರಚನೆಮಾಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಅಂತಹ ಸಂಯುಕ್ತರಂಗ ಸರಕಾರಗಳನ್ನು ಕೇಂದ್ರಸರಕಾರವು ಹಿಂದೆ ಕೇರಳದಲ್ಲಿ 1959 ಮತ್ತು 1969ರಲ್ಲಿ ಮತ್ತು ಪ. ಬಂಗಾಳದಲ್ಲಿ 1967 ಮತ್ತು 1969ರಲ್ಲಿ ಉರುಳಿಸಿದ್ದರೂ, ಆ ರಾಜ್ಯಗಳಲ್ಲಿ ಎಡ ಪಂಥೀಯ ಆಂದೋಳನವು ಬೆಳೆದಿದೆಯೇ ಅಥವಾ ಕ್ಷೀಣಗೊಂಡಿದೆಯೇ ಎಂಬುದು ಇಲ್ಲಿ ಮುಖ್ಯವಾದ ಪರಿಶೀಲಿಸಬೇಕಾದ ಪ್ರಶ್ನೆ. ನಮ್ಮ ಆಂದೋಳನವು ಈ ಎರಡು ರಾಜ್ಯಗಳಲ್ಲಿ ಮಾತ್ರ ಬೆಳೆದುದಲ್ಲದೆ, ಇತರ ರಾಜ್ಯಗಳಲ್ಲಿಯೂ ಬೆಳೆಯುತ್ತಿರುವುದನ್ನು ನಾವು ಗಮನಿಸಬಹುದು. ಸದ್ಯ ನಾವು ಮೂರು ರಾಜ್ಯಗಳಲ್ಲಿ ಸ್ಥಾನಗಳನ್ನು ಪಡೆಯುವಂತಾಗಿದೆ. ಅಲ್ಲದೆ, ಇತರ ಹಲವು ರಾಜ್ಯಗಳಲ್ಲಿ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಇಂದು ಗಮನಾರ್ಹವಾಗಿ ಬೆಳೆದಿವೆ. ಅಲ್ಲದೆ, ಎಡಪಂಥೀಯ ಆಂದೋಳನವನ್ನು ಕೇವಲ ವಿಧಾನ ಸಭೆಗಳ ಹಾಗೂ ಲೋಕಸಭೆಯ ಸ್ಥಾನಗಳಿಂದ ಅಳೆಯಲು ಸಾಧ್ಯವಿಲ್ಲ. ಜನರ ವಿವಿಧ ಸಂಘಟನೆಗಳಾದ ವಿದ್ಯಾರ್ಥಿ-ಯುವಜನರ, ರೈತರ, ಕಾರ್ಮಿಕರ, ಮಹಿಳೆಯರ, ಬುದ್ಧಿಜೀವಿಗಳ ಸಂಘಟನೆಗಳು ಗಣನೀಯವಾಗಿ ಬೆಳೆದಿರುವುದನ್ನೂ ಗಮನಿಸಬೇಕು.

ಪ್ರಶ್ನೆ : ಅಸ್ಸಾಂ ಚಳವಳದ ಕುರಿತು ನಿಮ್ಮ ಅಭಿಪ್ರಾಯಗಳೇನು ?

ಉತ್ತರ: ಅದೊಂದು ಪ್ರತ್ಯೇಕತಾವಾದಿ ಚಳವಳ. ಈಶಾನ್ಯ ಭಾರತದಲ್ಲಿಯೂ ಮುಖ್ಯವಾದ ಸಮಸ್ಯೆ 'ರಾಷ್ಟ್ರೀಯತೆ'ಯ ಪ್ರಶ್ನೆ. ಬಂಡವಾಳಶಾಹಿ-ಭೂಮಾಲೀಕ ಪರವಾದ ವರ್ಗಗಳು, ಪಕ್ಷಗಳು ಈ ಸಮಸ್ಯೆಯನ್ನು ಪರಿಹರಿಸಲು ಅಸಮರ್ಥವಾಗಿವೆ. ಕಾರಣ, ಅವುಗಳು ರಾಜ್ಯ ಮತ್ತು ಪ್ರಾದೇಶಿಕ ಸ್ವಾಯತ್ತತೆಯನ್ನು ಕೊಡುವ ಕುರಿತು ಆಸಕ್ತರಾಗಿಲ್ಲ. ಇಂತಹ ಸ್ವಾಯತ್ತತೆ ಮಾತ್ರ ಭಾರತ ಉಪಖಂಡದ ವಿವಿಧ ರಾಷ್ಟ್ರೀಯತೆಗಳ ಹಾಗೂ ಉಪರಾಷ್ಟ್ರೀಯತೆಗಳ ಜನರ ಆಶೋತ್ತರಗಳನ್ನು ಈಡೇರಿಸಬಲ್ಲದು. ಈ ಶತಮಾನದ ಪ್ರಾರಂಭದಲ್ಲಿ ಭಾರತದೊಂದಿಗೆ ಬರ್ಮಾ ದೇಶವೂ ಇತ್ತು. ನಂತರ ಬರ್ಮಾ ದೇಶವು ಭಾರತದಿಂದ ಪ್ರತ್ಯೇಕಗೊಂಡ ಮೇಲೆ ಪಾಕಿಸ್ತಾನ, ಬಾಂಗ್ಲಾ ದೇಶಗಳು ಪ್ರತ್ಯೇಕಗೊಂಡವು. ಈಗ ಈಶಾನ್ಯ ಭಾರತದ ರಾಜ್ಯಗಳು ಪ್ರತ್ಯೇಕತೆಯ ದಾರಿಹಿಡಿದಿವೆ. ಕಾಶ್ಮೀರದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ತಮಿಳುನಾಡಿನಲ್ಲಿ ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಶಕ್ತಿಗಳಿವೆ. ಅಲ್ಲದೆ, ವಿವಿಧ ರಾಜ್ಯಗಳಲ್ಲಿಯೂ ಪ್ರತ್ಯೇಕತಾ ಶಕ್ತಿಗಳು ತಲೆಎತ್ತುತ್ತಿವೆ. ಉದಾಹರಣೆಗೆ, ಆಂಧ್ರದಲ್ಲಿ ಪ್ರತ್ಯೇಕ ತೆಲಂಗಾಣ, ಮಹಾರಾಷ್ಟ್ರದಲ್ಲಿ ಪ್ರತ್ಯೇಕ ಮಹಾವಿದರ್ಭ, ಪ. ಬಂಗಾಳ, ಬಿಹಾರ, ಒರಿಸ್ಸಾ, ಉ. ಪ್ರದೇಶಗಳ ಬುಡಕಟ್ಟು ಜನಾಂಗಗಳ ಪ್ರತ್ಯೇಕ ಜಾರ್ಖಂಡ ಬೇಡಿಕೆಗಳು ಬಲಗೊಳ್ಳುತ್ತಿವೆ. ಅಸಮಾನ ಆರ್ಥಿಕ ಬೆಳವಣಿಗೆ ಮತ್ತು ಜನರ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಆಶೋತ್ತರಗಳನ್ನು ಈಡೇರಿಸದೇ ಇರುವುದು ಇದಕ್ಕೆ ಕಾರಣ ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಈ ಸಮಸ್ಯೆಗೆ ಸ್ಪಷ್ಟ ಪರಿಹಾರವನ್ನು ಸೂಚಿಸಲಾಗಿದೆ. ರಾಜ್ಯಗಳಿಗೆ ಸಂಪೂರ್ಣ ಸ್ವಾಯತ್ತತೆ ನೀಡಬೇಕೆಂದೂ, ಕೆಲವು ರಾಜ್ಯಗಳಲ್ಲಿನ ಉಪರಾಷ್ಟ್ರೀಯತೆಗಳ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರತಿಪಾದಿಸುತ್ತದೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರತ್ಯೇಕತೆಗೆ ವಿರುದ್ಧವಾಗಿದೆ. ಕಾಂಗ್ರೆಸ್ (ಐ) ಕೂಡಾ ಪ್ರತ್ಯೇಕತೆಗೆ ವಿರುದ್ಧವಾಗಿದೆ. ಆದರೆ, ರಾಷ್ಟ್ರೀಯ ಐಕ್ಯತೆಗೆ ದಾರಿ ಇಬ್ಬರದೂ ಬೇರೆಯಾಗಿದೆ. ಕಾಂಗ್ರೆಸ್(ಐ) ಅಥವಾ ಆರ್. ಎಸ್. ಎಸ್. ದೇಶದಲ್ಲಿ ಒಂದೇ ಒಂದು ಅಖಂಡ ರಾಷ್ಟ್ರೀಯತೆ ಇರುವುದೆಂಬ ಸುಳ್ಳು ಸಿದ್ಧಾಂತವನ್ನು ಜನರ ಮುಂದಿಡುತ್ತಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ರಾಜ್ಯ ಹಾಗೂ ಪ್ರಾದೇಶಿಕ ಸ್ವಾಯತತ್ತೆಯನ್ನು ನೀಡಲು ಕರೆ ಕೊಡುತ್ತಿದೆ,

ಅಸ್ಸಾಂನಲ್ಲಿ ಇಂತು ಪ್ರತ್ಯೇಕತೆಯ ವಿರುದ್ಧ ಅಲ್ಪಸಂಖ್ಯಾತರು ಚಳವಳ ಹೂಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅದಕ್ಕೆ ಬೆಂಬಲ ನೀಡುತ್ತಿದೆ. ಆ ದೇಶದಲ್ಲಿ 'ವಿದೇಶಿಯರ' ಸಮಸ್ಯೆಯನ್ನು 1971ರ ಆಧಾರದಲ್ಲಿ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತಿದೆ.

ಅಸ್ಸಾಂ ಚಳವಳವು ಕರ್ನಾಟಕಕ್ಕೂ ಒಂದು ಪಾಠವಾಗಿದೆ. ಇಲ್ಲಿ ಕನ್ನಡಿಗರಲ್ಲದೆ ಕೊಡವರು, ತುಳುವರು,

(6ನೇ ಪುಟ ನೋಡಿ)

ಗೋಲಿಬಾರಿನ ಖಂಡನೆ

ದ.ಕ. ಜಿಲ್ಲೆ, ಬಂಟ್ವಾಳ ತಾಲ್ಲೂಕು ರೈತರ ವಿಸ್ತೃತ ಸಭೆಯೊಂದು ತಾ. 8-8-80ರಂದು ಬಂಟ್ವಾಳದಲ್ಲಿ ಕಾಂ. ಬಿ. ರುಕ್ಮಯ್ಯ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಕಾಂ. ಬಿ. ನಾರಾಯಣ ಸಭೆ ಕರೆದಿರುವ ಉದ್ದೇಶವನ್ನು ತಿಳಿಸಿ ಸ್ವಾಗತಿಸಿದರು.

ಅನಂತರ ಅಧ್ಯಕ್ಷರು ಮಾತನಾಡಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ, ನಡೆಸಬೇಕಾದ ಚಳವಳಿಗಳನ್ನು ತಿಳಿಸಿದರು.

ಉ. ಕ. ಹಾಗೂ ಬಾಗೇಪಲ್ಲಿಯಲ್ಲಿ ರೈತರ ಚಳವಳಿಯ ಮೇಲೆ ಪೋಲೀಸರು ನಡಿಸಿರುವ ಗೋಲೀಬಾರನ್ನು ಈ ಸಭೆಯು ತೀವ್ರವಾಗಿ ಖಂಡಿಸಿ, ಬಾಗೇಪಲ್ಲಿಯಲ್ಲಿ ಶಾಂತಯುತವಾಗಿ ನಡೆದಿರುವ ಮೆರವಣಿಗೆಯ ಮೇಲೆ ಗೋಲೀಬಾರ್ ಮಾಡಿ 3 ಮಂದಿಯನ್ನು ಕೊಲೆಗೈದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದೂ ಸರಕಾರವನ್ನು ಒತ್ತಾಯಿಸಿದೆ.

ಪರಿಹಾರವಿಲ್ಲದೆ ರೈತನಿಗೆ ಭೂಮಿ ಕೊಡುವಂತೆ ಭೂಸುಧಾರಣೆ ಕಾಯಿದೆಗೆ ತಿದ್ದುಪಡಿ ತರಬೇಕೆಂದೂ ಸರಕಾರವನ್ನು ಒತ್ತಾಯಿಸಿದೆ.

ನೆರೆಸಂತ್ರಸ್ತರಿಗೆ ಮನೆ ಕಟ್ಟಲು ಕೊಟ್ಟಸಾಲವನ್ನು ಮಾಫಿ ಮಾಡಬೇಕೆಂದೂ, ಸರಕಾರಿ ಸ್ಥಳದಲ್ಲಿ ಮನೆಕಟ್ಟಿ ವಾಸವಾಗಿರುವ ಬಡ ನಿವಾಸಿಗಳಿಗೆ ದಂಡನೆ ಇಲ್ಲದೆ ಸ್ಥಳದ ಹಕ್ಕುಪತ್ರ ನೀಡಬೇಕೆಂದೂ ನಿರ್ಣಯಗಳಲ್ಲಿ ಸರಕಾರವನ್ನು ಕೇಳಿಕೊಂಡಿದೆ.

ರೈತರು ಮಾಡುವ ಉತ್ಪನ್ನಗಳಿಗೆ ಯೋಗ್ಯ ಬೆಲೆ ನೀಡಬೇಕೆಂದೂ ಬಳಕೆದಾರರಿಗೆ (ಸಬ್ಸಿಡಿ ನೀಡಿ) ನ್ಯಾಯಬೆಲೆಯಲ್ಲಿ ಆಹಾರ ಸಾಮಾಗ್ರಿಗಳನ್ನು ವಿತರಣೆ ಮಾಡಬೇಕೆಂದೂ ಕೇಳಿಕೊಂಡಿದೆ.

ಬೆಲೆ ಏರಿಕೆಯನ್ನು ತಡೆಯಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಅಗತ್ಯಸೇವಾ ಮಸೂದೆಯನ್ನು ಪ್ರತಿಭಟಿಸಿ ಕಾರ್ಮಿಕವರ್ಗ ಆಗಸ್ಟ್ 18ಕ್ಕೆ ನಡೆಸುವ ಮುಷ್ಕರಕ್ಕೆ ರೈತರ ಸಭೆಯು ಬೆಂಬಲ ವ್ಯಕ್ತಪಡಿಸಿದೆ. ಸಭೆಯನ್ನು ಉದ್ದೇಶಿಸಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಜನಾರ್ಧನನಾಯಕ್, ಸಿ. ಪಿ. ಐ. (ಎಂ) ನ ಬಂಟ್ವಾಳ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಶ್ರೀ ಬಿ ವಾಸುಗಟ್ಟಿ, ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಕಾಂ. ಬಿ. ಎಚ್. ಬಂಗೇರ ಮೊದಲಾದವರು ಮಾತನಾಡಿದರು.

33 ಜನರಿರುವ ತಾಲ್ಲೂಕು ರೈತ ಸಂಘದ ಸಮಿತಿಯನ್ನು ರಚಿಸಿ. ಕಾಂ. ಬಡಕೊಟ್ಟರುಕ್ಮಯ್ಯ ಪೂಜಾರಿಯವರನ್ನು ಅಧ್ಯಕ್ಷರಾಗಿ ಆರಿಸಿತು. ಉಪಾಧ್ಯಕ್ಷರಾಗಿ ಶ್ರೀ ಕುದನೆಡರ್ಸಪ್ಪ ಮೂಲ್ಯರನ್ನು ಚುನಾಯಿಸಿತು. ಕಾರ್ಯದರ್ಶಿಯಾಗಿ ಕಾಂ. ಬಿ. ನಾರಾಯಣರನ್ನು ಆಯ್ಕೆ ಮಾಡಲಾಯಿತು. ಜತೆ ಕಾರ್ಯದರ್ಶಿಯಾಗಿ ಬೊಳಂತೂರು ಚಂದ್ರಾರನ್ನು ಆರಿಸಿತು.

●

ಬಿಜಾಪುರ ರೈತಸಂಘದ ಅಧ್ಯಕ್ಷರ ಮನವಿ

ಬಿಜಾಪುರ ಜಿಲ್ಲೆಯ ರೈತಸಂಘದ ಅಧ್ಯಕ್ಷರಾದ ಕಾಂ. ಭೀಮಶಿ ಕಲಾದಗಿ ಅವರು ಕರ್ನಾಟಕದ ಮುಖ್ಯಮಂತ್ರಿಗಳಿಗೆ ರೈತ ಸಮಸ್ಯೆಗಳನ್ನು ಕುರಿತು ಒಂದು ಮನವಿ ಅರ್ಪಿಸಿದ್ದಾರೆ.

ಮಳೆಬೀಳದೆ ಬಿಜಾಪುರ ರೈತರ ಸಂಕಷ್ಟ, ಹಿತಾಸಕ್ತಿಗಳು ಮತ್ತು ಅಧಿಕಾರಿಗಳ ದುರ್ವರ್ತನೆ, ಕರೆಂಟ್ ನೀಡದಿರುವುದು, ಕೆ.ಎಸ್.ಆರ್.ಟಿ.ಸಿ. ಬಸ್ಸು ಬರದಿರುವುದು, ಅನೇಕ ತಾಲ್ಲೂಕಿನ ಗ್ರಾಮಗಳ ಹರಿಜನ ಗಿರಿಜನರಿಗೆ ನಿವೇಶನ ಮತ್ತು ಸಾಲ ನೀಡಿಕೆಯನ್ನು ತೀವ್ರಗೊಳಿಸುವುದು, ನೀರಿನ ಸೌಕರ್ಯ, ಸಹಕಾರಸಂಘ ಅವ್ಯವಹಾರಗಳು, ಈರುಳ್ಳಿ ಬೆಳೆ ನಿಷ್ಕರ್ಷೆ ಮುಂತಾದ ಸಮಸ್ಯೆಗಳ ಬಗ್ಗೆ ಗಮನ ನೀಡಬೇಕೆಂದು ಅವರು ಮನವಿಮಾಡಿದ್ದಾರೆ.

○

ಬೆಲೆಏರಿಕೆ ವಿರೋಧಿಸಿ ಉಡುಪಿಯಲ್ಲಿ ಮತ ಪ್ರದರ್ಶನ

ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯ ಆಶ್ರಯದಲ್ಲಿ 8-8-80 ರಂದು ಉಡುಪಿಯಲ್ಲಿ ಬೆಲೆಏರಿಕೆ ವಿರೋಧಿ ಪ್ರದರ್ಶನ ನಡೆಯಿತು.

ಕಾರ್ಮಿಕರು ಭಾರಿ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗುತ್ತಾ ನಡೆದರು. ಎಲ್.ಐ.ಸಿ., ಬ್ಯಾಂಕುಗಳು, ಕೆ.ಇ.ಬಿ., ಮುನಿಸಿಪಾಲಿಟಿ, ಅಂಚೆ, ತಂತಿ ಹಾಗೂ ಇತರ ಇಲಾಖೆಗಳ ನೌಕರರು ಬೆಲೆಏರಿಕೆ ವಿರೋಧಿ ಫಲಕಗಳನ್ನು ಹೊತ್ತು ಇದರಲ್ಲಿ ಭಾಗವಹಿಸಿದ್ದರು.

ಕ್ರಿಯಾವೇದಿಕೆಯ ಸಂಚಾಲಕ ಶ್ರೀ ಪಿ. ವಿಶ್ವನಾಥ ರೈ ಅವರು ತಹಸೀಲ್ದಾರರಿಗೆ ಮನವಿ ಅರ್ಪಿಸಿದರು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಚುರುಕುಗೊಳಿಸಿ, ದಿನಬಳಕೆ ವಸ್ತುಗಳ ಬೆಲೆ ಇಳಿಸಬೇಕೆಂದು ಮನವಿಯಲ್ಲಿ ನಮೂದಿಸಲಾಗಿತ್ತು. ತುಟ್ಟಿಭತ್ಯ ಏರಿಕೆಗೆ ಒತ್ತಾಯ, ರೈತರ ಮೇಲಿನ ಗೋಲಿಬಾರ್ ಖಂಡನೆ ಇವೂ ಮನವಿಯಲ್ಲಿ ಇದ್ದವು. ಅನೇಕ ಕಾರ್ಮಿಕ ಸಂಘಟನೆಗಳ ನಾಯಕರು ಮನವಿ ಅರ್ಪಿಸಿದಾಗ ಉಪಸ್ಥಿತರಿದ್ದರು.

○

ಕಾಂ. ಇ. ಎಂ. ಎಸ್. ರೊಂದಿಗೆ ಒಂದು ವಿಶೇಷ ಸಂದರ್ಶನ

(5ನೇ ಪುಟದಿಂದ)

ಕೊಂಕಣಿಗಳು ಎಂಬ ವಿವಿಧ ಉಪರಾಷ್ಟ್ರೀಯತೆಗಳ ಜನರಿರುವರು. ಅವರ ಆಶೋತ್ತರಗಳನ್ನು ಗಮನಿಸಿ, ಅವರ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸಬೇಕು. ಅವರಲ್ಲಿ ಪ್ರತ್ಯೇಕತಾ ಭಾವನೆಯು ಕೆರಳದಂತೆ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈಗಿನಿಂದಲೇ ಪ್ರಯತ್ನಿಸಬೇಕು. ಅವರನ್ನು ಶೋಷಣೆಯ ವಿರುದ್ಧ ಬೃಹತ್ ಆಂದೋಳನದಲ್ಲಿ ತೊಡಗಿಸಬೇಕು. ಎಡಪಂಥೀಯ ಚಟುವಟಿಕೆಗಳು ಜನರ ಭಾಷೆ, ಉಪಭಾಷೆಗಳಲ್ಲಿಯೇ ನಡೆಸಬೇಕು.

ಪ್ರಶ್ನೆ : ವಿದ್ಯಾರ್ಥಿ ಯುವಜನ ಸಂಘಟನೆಯ ಕುರಿತು ನಿಮ್ಮ ಅಭಿಪ್ರಾಯಗಳೇನು ?

ಉತ್ತರ : ನಾವು ಸಂಘಟಿಸುವ ವಿದ್ಯಾರ್ಥಿಗಳು, ಯುವಜನರು ಯಾವ ವರ್ಗದವರು ? ಶ್ರೀಮಂತವರ್ಗವು ಸಮಾಜದಲ್ಲಿ ಯಥಾಸ್ಥಿತಿಯನ್ನು ಪ್ರತಿಪಾದಿಸುವುದು. ಆ ವರ್ಗದಿಂದ ಬರುವ ವಿದ್ಯಾರ್ಥಿಗಳೂ ಯುವಜನರೂ ಅದನ್ನೇ ಪ್ರತಿಪಾದಿಸುವರು. ಸಹಜವಾಗಿಯೇ ಅವರು 'ಸಂಜಯ ಗಾಂಧಿ'ಯ ಅಥವಾ 'ಆರ್. ಎಸ್. ಎಸ್.' ಗುಂಪಿಗೇ ಸೇರುವರು. ಇತರ ವರ್ಗಗಳ, ರೈತರ, ಕಾರ್ಮಿಕರ, ಮಧ್ಯಮವರ್ಗದ ವಿದ್ಯಾರ್ಥಿಗಳು, ಯುವಜನರು ನಿರುದ್ಯೋಗ ಅರೆಉದ್ಯೋಗ ಸಮಸ್ಯೆಗಳಲ್ಲಿ ತೊಳಲಾಡುತ್ತಿದ್ದಾರೆ. ಅವರು ಸಾಮಾಜಿಕ ಬದಲಾವಣೆಯನ್ನು ಬಯಸುವರು. ಹೀಗಾಗಿ, ನಾವು ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿಗಳನ್ನು, ಯುವಜನರನ್ನು ಸಂಘಟಿಸಬೇಕು. ಅವರು ಮೊದಲು ನಿರುದ್ಯೋಗ ಮೊದಲಾದ ತಮ್ಮ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೋಸ್ಕರ ಸಂಘಟಿತರಾಗಬೇಕು. ಆದರೆ, ಅವರಿಂದಲೇ ಯಾವ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಿಲ್ಲ. ಅವರ ಸಂಘಟನೆಯು ರೈತರ ಮತ್ತು ಕಾರ್ಮಿಕರ ಹಿತಾಸಕ್ತಿಗಳಿಗನುಗುಣವಾಗಿರಬೇಕು. ಅಂತಿಮವಾಗಿ ಅವರ ಸಂಘಟನೆಯ ಗುರಿಯು ಸ್ವಾತಂತ್ರ್ಯ, ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸಿ ಸಮಾಜವಾದಿ ಸಮಾಜ ಸ್ಥಾಪಿಸುವ ಗುರಿಗಿಂತ ಪ್ರತ್ಯೇಕವಾಗಿರಲಾರದು. ಮಧ್ಯಮವರ್ಗದ ಯುವಜನರೊಂದಿಗೇ, ರೈತರ ಮತ್ತು ಕಾರ್ಮಿಕರ ವರ್ಗಗಳ ಯುವಜನರನ್ನೂ ಹೆಚ್ಚು ಹೆಚ್ಚು ಸಂಘಟಿಸಬೇಕು.

ಪ್ರಶ್ನೆ : ಎಲ್ಲಾ ಪಕ್ಷಗಳ ಧುರೀಣರು ಮುದುಕರಾಗುತ್ತಿದ್ದಾರಲ್ಲಾ ? ಯುವಶಕ್ತಿಗೆ ಹೆಚ್ಚು ಅವಕಾಶ ಕೊಡಬೇಡವೆ ?

ಉತ್ತರ : ಒಬ್ಬನು ಪ್ರಾಯದಲ್ಲಿ ಯುವಕನಾದಕೂಡಲೇ ಅವನು ಕ್ರಾಂತಿಕಾರ ಎಂದು ಹೇಳಲಾಗುವುದಿಲ್ಲ. ಯುವಶಕ್ತಿ, ಯುವರಕ್ತ ಇತ್ಯಾದಿಗಳೆಲ್ಲಾ ಯಾಕೆ ? ಸದ್ಯದ ಸಾಮಾಜಿಕ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಂಡು ಹೋಗಲಿಕ್ಕೊ ಅಥವಾ ಸತತ ಪ್ರಯತ್ನದಿಂದ ಅದನ್ನು ಬದಲಾಯಿಸಲಿಕ್ಕೊ ? ಸಾಮಾಜಿಕ ವ್ಯವಸ್ಥೆಯ ಬದಲಾವಣೆಯೇ ನಮ್ಮ ಗುರಿಯಾದರೆ, ಹೋಚಿಮಿನ್, ಮಾವೋ ಯಾವ ರೀತಿಯಲ್ಲಿ ಈಗಿನ ಯುವಕರಿಂದ ಕಡಿಮೆ ಕ್ರಾಂತಿಕಾರಿಗಳಾಗಿದ್ದಾರೆ ?

ಪ್ರಶ್ನೆ : ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಕೇಪಿಟೇಶನ್ ಫೀ ಪಡೆಯುವ ಕುರಿತು ನಿಮ್ಮ ಅಭಿಪ್ರಾಯಗಳೇನು ?

ಉತ್ತರ : ಕೇಪಿಟೇಶನ್ ಫೀ ಪಡೆಯುವುದಕ್ಕಿಂತಲೂ ಅದರ ಪರವಾಗಿ ಮುಂದೊಡ್ಡಲಾಗುತ್ತಿರುವ 'ಖಾಸಗೀ ಉದ್ಯಮ'ದ ತತ್ವಜ್ಞಾನದ ಕುರಿತು ನಾವು ಹೆಚ್ಚು ಗಂಭೀರವಾಗಿ ಯೋಚಿಸಬೇಕು. ಕೇಪಿಟೇಶನ್ ಫೀಯಿಂದ ಶ್ರೀಮಂತರಿಂದ ಹಣಪಡೆದು ಬಡವರಿಗೆ ಶಿಕ್ಷಣ ಕೊಡುತ್ತಿದ್ದೇವೆ ಎಂದು ಹೇಳಲಾಗುತ್ತಿದೆ. ಕೇಪಿಟೇಶನ್ ಫೀಯಿಂದ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಖಾಸಗೀ ರಂಗವು ನಡೆಸದೇ ಇದ್ದರೆ, ಸರಕಾರವು ಬಡಜನರ ಮೇಲೆ ತೆರಿಗೆ ವಿಧಿಸಿ ಸಂಗ್ರಹಿಸಿದ ಹಣದಿಂದ ಈ ಸಂಸ್ಥೆಗಳನ್ನು ನಡೆಸಬೇಕಾಗುವುದು ಎಂದು ಹೇಳಲಾಗುತ್ತಿದೆ. ಆದರೆ, ಸರಕಾರ ಬಡಜನರ ಮೇಲೆ ತೆರಿಗೆ ವಿಧಿಸುವುದನ್ನು ವಿರೋಧಿಸುವವರು ಕೇಪಿಟೇಶನ್ ಫೀ ಕೊಡಲು ಶ್ರೀಮಂತರು ಬಡವರನ್ನು ಸುಲಿಯುತ್ತಿದ್ದಾರೆಂಬ, ಮುಂದೆ ಅವರ ವೃತ್ತಿಯಲ್ಲಿಯೂ ಅಪಾರ ಹಣಗಳಿಸಲು ಬಡವರನ್ನು ಸುಲಿಯಲಿದ್ದಾರೆಂಬ ರಹಸ್ಯವನ್ನು ಮುಚ್ಚಿಡಲಾಗುತ್ತಿದೆ. ಇದು ಬಹಳ ಅಪಾಯ. ನಾವು ಈ ವಿಷಯವನ್ನು ಜನರಿಗೆ ಚೆನ್ನಾಗಿ ತಿಳಿಸಿ ಅವರಲ್ಲಿ ಅರಿವು ಮೂಡಿಸಬೇಕು.

●

ತೋಟ ಕಾರ್ಮಿಕರ ಮುಖಂಡರ ಮೇಲೆ ಹಲ್ಲೆ

ತೋಟಕೆಲಸಗಾರರ ಸಂಘ ಸುಳ್ಯ (ಸಿ. ಐ. ಟಿ ಯು) ಪ್ರಧಾನ ಕಾರ್ಯದರ್ಶಿ ಶ್ರೀ ಕಾತ್ತಮುತ್ತುರವರ ಮೇಲೆ ತಾ. 9-8-80ರಂದು ರೇಂಜ್ ಫಾರೆಸ್ಟ್ ಆಫೀಸರ್ ದೊರೈಸ್ವಾಮಿ ಮತ್ತು ಮಾಲಿ ಶಿವರಾಮ ಎಂಬವರು ಮನೆಗೆ ಆಕ್ರಮ ಪ್ರವೇಶ ಮಾಡಿ ಮಾರಕ ಆಯುಧಗಳಿಂದ ಧಾಳಿಮಾಡಿದರು. ತೀವ್ರ ಗಾಯಗೊಂಡ ಶ್ರೀ ಕಾತ್ತಮುತ್ತು ಸುಳ್ಯ ಸರಕಾರೀ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿದ್ದಾರೆ.

ಸುಳ್ಯ ಪೋಲೀಸ್ ಸ್ಟೇಷನ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂಧಿಯವರು ಮತ್ತು ಪುತ್ತೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರ ತುರ್ತುಕ್ರಮದಿಂದಾಗಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು.

ಸುಳ್ಯ ಪೋಲೀಸರು ಸದ್ರಿ ರೇಂಜ್ ಫಾರೆಸ್ಟ್ ಆಫೀಸರ್ ಮತ್ತು ಮಾಲಿ ಮೇಲೆ ಸೆಕ್ಷನ್ 324 ಮತ್ತು 448 ಐ. ಪಿ. ಸಿ. ಪ್ರಕಾರ ಕೇಸು ದಾಖಲೆ ಮಾಡಿಕೊಂಡಿದ್ದಾರೆ.

ತಮ್ಮ ಯೂನಿಯನ್ ಮುಖಂಡನ ಮೇಲೆ ನಡೆದ ಧಾಳಿಯನ್ನು ಪ್ರತಿಭಟಿಸಿ ಈ ದಿನ ತಾ. 11-8-80ರಂದು ತೋಟಕಾರ್ಮಿಕರು ಒಂದು ದಿನದ ಪ್ರತಿಭಟನಾ ಮುಷ್ಕರ ನಡೆಸಿದರು. ಸರ್ಕಾರವು ಈ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳದಿದ್ದಲ್ಲಿ ತೋಟಕಾರ್ಮಿಕರು ಬೃಹತ್ ಹೋರಾಟವನ್ನು ನಡೆಸಲು ತೀರ್ಮಾನಿಸಿರುವರು.

●

ಅಧಿಕಾರಿಯೇ ದಂಡ ತೆತ್ತರು

ಮೈಸೂರು ರೈಲ್ವೆ ವರ್ಕ್‌ಷಾಪ್ ಮುಂಭಾಗದ ರೈಲ್ವೆ ಮೈದಾನದಲ್ಲಿ ಬಾಳೆಹಣ್ಣು, ಕಡಲೇಕಾಯಿ, ಎಳನೀರು ಮುಂತಾದ ತಿಂಡಿಪದಾರ್ಥಗಳನ್ನು ಬಹಳ ಕಾಲದಿಂದಲೂ ರೂಢಿಯಿಂದ ಮಾರಾಟ ಮಾಡುತ್ತಿದ್ದ ವ್ಯಾಪಾರಸ್ಥರ ಮೇಲೆ ವರ್ಕ್‌ಷಾಪ್ ಮೇನೇಜರ್‌ರವರಾದ ಶ್ರೀ ವಿಜಯ ಮೋಹನ್‌ರವರು ರೈಲ್ವೆ ರಕ್ಷಣಾ ದಳಕ್ಕೆ (ಆರ್ ಪಿ ಎಫ್.) ದೂರು ಮಾಡಿ, ಅವರೆಲ್ಲರನ್ನ ರೈಲ್ವೆ ಮ್ಯಾಜಿಸ್ಟ್ರೇಟರ್ ಮುಂಭಾಗದಲ್ಲಿ ಹಾಜರ್ ಪಡಿಸುವಂತೆ ಮಾಡಿ ಅವರಿಗೆ ದಂಡ ವಿಧಿಸಲಾಯಿತು. ಇದನ್ನು ಪ್ರತಿಭಟಿಸಿ ರೈಲ್ವೆ ವರ್ಕ್‌ಷಾಪ್ ಕೆಲಸಗಾರರು, ರೈಲ್ವೆ ಮ್ಯಾಜಿಸ್ಟ್ರೇಟರನ್ನು ಮತ್ತು ವರ್ಕ್ಸ್ ಮೇನೇಜರ್‌ರವರನ್ನು ಘೇರಾವ್ ಮಾಡಿ ಘೋಷಣೆಗಳನ್ನು ಕೂಗಿದ್ದರ ಪರಿಣಾಮವಾಗಿ, ನ್ಯಾಯಾಲಯ ಹಾಕಿದ್ದ ದಂಡವನ್ನು ರಕ್ಷಣಾ ದಳದ ಇನ್‌ಸ್ಪೆಕ್ಟರ್ ರವರು ತಮ್ಮ ಜೇಬಿನಿಂದ ವ್ಯಾಪಾರಸ್ಥರಿಗೆ ಕೊಡುವಂತೆಯೂ ಮತ್ತು ಅವರು ಇನ್ನು ಮುಂದೆ ಅಲ್ಲಿ ವ್ಯಾಪಾರ ಮಾಡಿಕೊಂಡುಹೋಗುವಂತೆಯೂ ಅವಕಾಶವಾಯಿತು. ಈ ಹೋರಾಟದ ಮುಂದಾಳತ್ವವನ್ನು ಕಾಂ. ವೆಂಕಟೇಶ್ ಮತ್ತು ಕಾಂ. ಲಕ್ಕಪ್ಪನವರು ವಹಿಸಿದ್ದರು.

○

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಅಸ್ಸಾಂ ಏಕತಾ ದಿನಾಚರಣೆ ಸಭೆ

ಇದೇ ತಾ. 15-8-80ರಂದು ಅಸ್ಸಾಂ ಏಕತಾ ದಿನಾಚರಣೆಯನ್ನು ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಸಭೆಯನ್ನು ಮಂಗಳೂರು ಯುವಜನ ಸಂಘಟನೆಯ ಆಫೀಸು ಮೈದಾನ್ ರೋಡ್ ಮಂಗಳೂರು ಇಲ್ಲಿ ತಾಲ್ಲೂಕು ಸಮಿತಿಯ ಸದಸ್ಯರಾದ ನಾರಾಯಣ ನಾಯರ್ ಇವರ ಘನ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಬಿ. ಉಮಾನಾಥನವರು ಸ್ವಾಗತಿಸಿ ಈಶಾನ್ಯ ಭಾರತದಲ್ಲಿ ನಡೆಯುವ ಪ್ರತ್ಯೇಕತಾ ಚಳವಳಿಯನ್ನು ಯಾಕೆ ವಿರೋಧಿಸಬೇಕೆಂದು ವಿವರಿಸಿದರು. ಅನಂತರ ಮಾತನಾಡಿದ ರಾಜ್ಯ ಸಮುದಾಯದ ಉಪಾಧ್ಯಕ್ಷರಾದ ಮಾಧವನವರು ಅಸ್ಸಾಂ ಚಳವಳಿಯನ್ನು ವಿದೇಶಿ ಹಾಗೂ ದೇಶೀಯ ಗುತ್ತೇದಾರಿ ಬಂಡವಾಳಶಾಹಿ ಹಾಗೂ ಆಳುವ ಪಕ್ಷದವರು ಪ್ರಚೋದಿಸಿದ ಹೋರಾಟವೆಂದೂ ತಿಳಿಸಿ ಅಲ್ಲದೆ ವಿದೇಶಿ ಮಿಶನರಿ ಸಂಸ್ಥೆಗಳು, ಎಡ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯುದಂದೆ ಈ ಸಂಸ್ಥೆಗಳು ಪ್ರೋತ್ಸಾಹ ನೀಡುತ್ತಿರುವುದನ್ನೂ ನಾವು ನೋಡುತ್ತೇವೆ. ಈ ದಿಸೆಯಲ್ಲಿ ಯುವಜನರು ಪ್ರಗತಿಪರ ಶಕ್ತಿಗಳೂ ಹಾಗೂ ಎಡ ಶಕ್ತಿಗಳೂ ಒಟ್ಟಾಗಿ ಅಸ್ಸಾಂಪ್ರತ್ಯೇಕತಾ ಚಳುವಳಿಯನ್ನು ಸೋಲಿಸಬೇಕೆಂದು ಕರೆ ನೀಡಿದರು. ಈಶಾನ್ಯ ಭಾರತದಲ್ಲಿ ನಡೆಯುವ ಚಳವಳಿಯು ಇಡೀ ದೇಶದ ಸಮಗ್ರತೆಗೆ ಭಂಗವನ್ನುಂಟುಮಾಡುವ ಹಾಗೂ ಭಾರತ ದೇಶದ ಅಸ್ತಿತ್ವವನ್ನೆ ಬುಡಮೇಲು ಮಾಡುವ ಪಿತೂರಿ ಎಂದು ವಿವರಿಸಿ ಈ ರೀತಿಯ ಪ್ರತಿಗಾಮಿಗಳ ರಾಷ್ಟ್ರವಿರೋಧಿ ಚಳವಳಿಯನ್ನು ಖಂಡಿಸಿದರು. ಅಲ್ಲದೆ ಪಶ್ಚಿಮ ಬಂಗಾಳ, ತ್ರಿಪುರದಲ್ಲಿರುವ ಎಡರಂಗದ ಸರಕಾರವನ್ನು ಪ್ರತಿಗಾಮಿಶಕ್ತಿಗಳು ಕೇಂದ್ರ ಸರಕಾರದ ಬೆಂಬಲ ಪಡೆದು ಅಲ್ಲಿಯ ಜನತೆಯ ಸರಕಾರವನ್ನು ಉರುಳಿಸುವ ಪ್ರಯತ್ನವನ್ನು ಖಂಡಿಸಿದರು. ಈ ರೀತಿಯ ಕಾರ್ಮಿಕ ವಿರೋಧಿ, ಜನ ವಿರೋಧಿ, ಪ್ರಜಾಸತ್ತಾತ್ಮಕ ವಿರೋಧಿ ಬಂಡವಾಳಶಾಹಿ ಪ್ರತಿಗಾಮಿಗಳ ಒಳಸಂಚಿನ ಪಿತೂರಿಯನ್ನು ಪ್ರಗತಿಪರ ಯುವಜನಾಂಗ ಪ್ರತಿಭಟಿಸಬೇಕೆಂದು ವಿನಂತಿಸಿದರು.

ಅಧ್ಯಕ್ಷ ನಾರಾಯಣ ನಾಯರ್ ಮಾತನಾಡುತ್ತಾ ಅಸ್ಸಾಂ ಚಳವಳಿಯ ನಿಜರೂಪವನ್ನು ಪ್ರಗತಿಪರ ಜನಾಂಗಕ್ಕೆ ತಿಳಿಸುವುದೇ ಹಾಗೂ ಈಶಾನ್ಯ ಭಾರತದ ಚಳುವಳಿಯು ದೇಶದ ಭದ್ರತೆಗೆ ಗಂಡಾಂತರಕಾರಿ ಎಂದು ತಿಳಿಸುವುದು ಯುವಜನಾಂಗದ ಕರ್ತವ್ಯವಾಗಿದೆ ಎಂದು ಅಧ್ಯಕ್ಷರು ತನ್ನ ಭಾಷಣದಲ್ಲಿ ಒತ್ತಿ ಹೇಳಿದರು. ಕೊನೆಗೆ ಬಿ ಭುಜಂಗ ಮಲರು ಧನ್ಯವಾದ ಅರ್ಪಿಸಿ ಸಭೆ ಮುಕ್ತಾಯವಾಯಿತು.

●

ಕೋಣಿಯಲ್ಲಿ ವನಮಹೋತ್ಸವ

ದ.ಕ. ಜಿಲ್ಲೆಯ ಕೋಣಿ ಗ್ರಾಮದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಮತ್ತು ಗ್ರಾಮಪಂಚಾಯಿತಿ ಆಶ್ರಯದಲ್ಲಿ ಇತ್ತೀಚೆಗೆ ವನಮಹೋತ್ಸವ ಆಚರಿಸಲಾಯಿತು. ಪಂಚಾಯಿತಿ ಉಪಾಧ್ಯಕ್ಷ ಶ್ರೀ ಕೆ. ಅನಂತ ಪೂಜಾರಿ ಅವರು ಸಸಿನೆಟ್ಟು ಉದ್ಘಾಟಿಸಿದರು. ಶ್ರೀ ಫಿಲಿಪ್ ಡಿಸೋಜ ಅಧ್ಯಕ್ಷತೆ ವಹಿಸಿದ್ದರು. ರೈತಸಂಘದ ಅಧ್ಯಕ್ಷ ಶ್ರೀ ಕೆ. ಆನಂದಭಂಡಾರಿ ಅವರು ವನಮಹೋತ್ಸವದ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು.

ಯುವಜನ ಸಂಘಟನೆಯ ಅಧ್ಯಕ್ಷ ಶ್ರೀ ಕೆ. ರಾಧಾಕೃಷ್ಣ ಅವರ ನೇತೃತ್ವದಲ್ಲಿ 500 ಮಾಗುವಾನಿ ಗಿಡ, 300 ಗುಗ್ಗುಳದೂಪ ಗಿಡ, ಲಿಂಬೆ ಮತ್ತು ನೀಲಗಿರಿ ಸಸಿಗಳನ್ನು ನೆಡಲಾಯಿತು. ಸಂಘಟನೆಯ ಕಾರ್ಯದರ್ಶಿ ಶ್ರೀ ಕೆ. ಗುರುರಾಜ ಅವರು ಸಭೆಗೆ ವಂದಿಸಿದರು.

○

ಬಾಪೂಜಿ ವಿದ್ಯಾರ್ಥಿ ನಿಲಯದಲ್ಲಿ ಹೋರಾಟ

ಮಾಗಡಿ ರಸ್ತೆಯಲ್ಲಿರುವ ಬಾಪೂಜಿ ವಿದ್ಯಾರ್ಥಿ ನಿಲಯದ ದಲಿತ ವಿದ್ಯಾರ್ಥಿಗಳ ಸರಿಯಾದ ಊಟದ ವ್ಯವಸ್ಥೆ, ನೀರಿನ ಸೌಕರ್ಯ, ವೈದ್ಯಕೀಯ ಸೌಲಭ್ಯ ನೀಡಬೇಕು, ಸರ್ಕಾರದ ಹಣ ದುರುಪಯೋಗ ಪಡಿಸುತ್ತಿರುವ ಮ್ಯಾನೇಜ್‌ಮೆಂಟಿನಿಂದ ವಿದ್ಯಾರ್ಥಿ ನಿಲಯದ ಆಡಳಿತವನ್ನು ಸರ್ಕಾರವೇ ವಹಿಸಿಕೊಳ್ಳಬೇಕು, ಮಾಸಿಕ ವೇತನವನ್ನು 50-00 ರೂ ನಿಂದ 75-00 ರೂ.ಗಳ ವರೆಗೂ ಹೆಚ್ಚಿಸಬೇಕು, ಎಂಬ ನ್ಯಾಯಯುತ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಸುಮಾರು 1 ತಿಂಗಳಿಂದ ಹೋರಾಟದಲ್ಲಿ ಬಂದಿದ್ದಾರೆ. ತಮಗೆ ನ್ಯಾಯಬೇಕೆಂದು ಕೇಳುವ ವಿದ್ಯಾರ್ಥಿಗಳ ಮೇಲೆ ಆಡಳಿತವರ್ಗ ಗೂಂಡಾಗಳನ್ನು ಬಿಟ್ಟು ವಿದ್ಯಾರ್ಥಿಗಳನ್ನು ಎದುರಿಸಿ ಬೆದರಿಸುತ್ತಿದ್ದಾರೆ. ವಿದ್ಯಾರ್ಥಿಗಳು ದಿನಾಂಕ 20-8-80ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ವಿದ್ಯಾರ್ಥಿ ನಿಲಯದ ಮುಂಭಾಗದಲ್ಲಿ ಪ್ರಾರಂಭಿಸಿದ್ದಾರೆ.

ಹರಿಹರದಲ್ಲಿ ತ್ರಿಪುರಾ ನಿಧಿ ಸಂಗ್ರಹ

ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ ತ್ರಿಪುರಾ ಸಹಾಯ ನಿಧಿಗೆ ರೂ. 432-00 ಸಂಗ್ರಹಿಸಲಾಗಿದೆ, ಇದೂ ಅಲ್ಲದೆ 10 ಟವೆಲುಗಳು, 2 ಸೀರೆಗಳು ಮತ್ತು 2 ಪಂಚೆಗಳನ್ನು ಸಂಗ್ರಹಿಸಲಾಗಿದೆ.

●

ಪೋಲೀಸು ದೌರ್ಜನ್ಯ ಖಂಡನೆ

ತಾ. 18-8-80 ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಂಗಳೂರು ತಾಲ್ಲೂಕು ಸಮಿತಿಯ ಸಂಚಾಲಕ ಬಿ. ಉಮಾನಾಥ್ ಹಾಗೂ ಕೆಲವು ಕಾರ್ಯಕರ್ತರು ಬೋಳಾರದಲ್ಲಿ ತಮ್ಮ ಕಾರ್ಯಾಲಯಕ್ಕೆ ಹೋಗುತ್ತಿದ್ದಾಗ ಪೋಲೀಸರು ಸುತ್ತುವರಿದು ಅವರ ಮೇಲೆ ಕೈಮಾಡಿ ತೀವ್ರವಾಗಿ ಥಳಿಸಿದ್ದು ಮಾತ್ರವಲ್ಲದೆ ಅವರ ಜೊತೆಯಲ್ಲಿದ್ದ ಕಾರ್ಯಕರ್ತರಿಗೂ ಹೊಡೆದು ಬಂಧಿಸಿರುವರು.

ಈ ರೀತಿಯ ಅಮಾನುಷವಾದ ಪೋಲೀಸು ದೌರ್ಜನ್ಯವನ್ನು ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಂಗಳೂರು ತಾಲ್ಲೂಕು ಸಮಿತಿಯು ತೀವ್ರವಾಗಿ ಖಂಡಿಸಿದೆ. ಈ ರೀತಿಯ ಪೋಲೀಸು ದೌರ್ಜನ್ಯಕ್ಕೆ ಕಾರಣರಾದ ಪೋಲೀಸು, ಹಾಗೂ ಪೋಲೀಸು ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಂಗಳೂರು ತಾಲ್ಲೂಕು ಸಮಿತಿಯು ಸರಕಾರವನ್ನು ಒತ್ತಾಯಿಸಿದೆ.

○

ಬೆಲೆ ಏರಿಕೆ ವಿರುದ್ಧ ಕುಂದಾಪುರದಲ್ಲಿ ಬೃಹತ್ ಪ್ರದರ್ಶನ

ದ.ಕ. ಜಿಲ್ಲೆಯ ಕುಂದಾಪುರದಲ್ಲಿ ತಾರೀಖು 8ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಸಿ.ಐ.ಟಿ.ಯು ವಿನ ನೇತೃತ್ವದಲ್ಲಿ ಬೆಲೆಯೇರಿಕೆಯ ಪ್ರತಿಭಟನಾರ್ಥ ಕಾರ್ಮಿಕರ ಬೃಹತ್ ಮತಪ್ರದರ್ಶನವು ತಾಲ್ಲೂಕು ಕಚೇರಿಯ ಎದುರು ನಡೆದು, ಮುಖ್ಯ ಕೇಳಿಕೆಗಳನ್ನೊಳಗೊಂಡ ಮನವಿಯೊಂದನ್ನು ತಹಸೀಲ್ದಾರರವರಿಗೆ ಕೊಡಲಾಯಿತು. ಅನಂತರ ಕಾರ್ಮಿಕರು ಸರಕಾರದ ನೀತಿಯನ್ನು ಖಂಡಿಸುವ ಹಾಗೂ ಅಕ್ರಮ ದಾಸ್ತಾನುಗಾರರನ್ನು ಶಿಕ್ಷಿಸಿರಿ ಅನ್ನುವ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ಪೇಟೆಯ ಒಂದು ಸುತ್ತು ಬಂದು, ಶಾಸ್ತ್ರೀ ಪಾರ್ಕಿನ ಬಳಿ ಸೇರಿದರು. ಸಂಜೆ ಘಂಟೆ 5ಕ್ಕೆ ಸರಿಯಾಗಿ ಸಾರ್ವಜನಿಕ ಸಭೆ ಜರಗಿತು. ಸಭೆಯಲ್ಲಿ ಕಾಂ. ಅಬ್ರಹಾಂ ಕರ್ಕಡ, ಸಿ ನಾರಾಯಣ, ಶಂಕರ ಮೊದಲಾದವರು ಭಾಷಣ ಮಾಡಿದರು.

ಯಶಸ್ವಿ ಬೀದರ್ ಬಂದ್

ಎಲ್ಲ ರಾಜಕೀಯ ಪಕ್ಷಗಳು, ಕಿಸಾನ್‌ಸಂಘ ಮತ್ತು ವಿದ್ಯಾರ್ಥಿ ಸಂಘಗಳು ಕರೆನೀಡಿದ್ದ ಆಗಸ್ಟ್ 4ರ ಬೀದರ್ ಬಂದು ಯಶಸ್ವಿಯಾಗಿ ನಡೆದಿತ್ತು. ಬೆಲೆಏರಿಕೆ, ನಿರುದ್ಯೋಗ ಮತ್ತು ಬರಗಾಲ ಪೀಡಿತ ಜನರಿಗೆ ಪರಿಹಾರ–ಇವೇ ಮೊದಲಾದ ಸಮಸ್ಯೆಗಳ ಬಗ್ಗೆ ಸರಕಾರದ ಗಮನ ಸೆಳೆಯಲು ಈ ಕಾರ್ಯಕ್ರಮವನ್ನು ಹಾಕಲಾಗಿತ್ತು. ಅಂದು ನಡೆದ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರುಗಳಾದ ಕಾಂ. ಸಂಗ್ರಾಮ ಮತ್ತು ಸುಂದರರಾಜ್, ಇತರ ವಿರೋಧ ಪಕ್ಷಗಳ ಮುಖಂಡರುಗಳಾದ ಶ್ರೀಯುತರುಗಳಾದ ಬಾಬುರಾವ್, ಗುರು ಚಿಂಚೋಳಿಕರ್, ಕ್ರಿಸ್ಟಿ, ಕೃಷ್ಣರಾವ್ ಕಾಶೀನಾಥ ಬೆಳೂರ್, ಶರಣಪ್ಪ ಗದಗೆ ಮೊದಲಾದವರು ಬಹಿರಂಗಸಭೆಯಲ್ಲಿ ಮಾತನಾಡಿ ಸಮಸ್ಯೆಗಳು ಪರಿಹಾರವಾಗದಿದ್ದಲ್ಲಿ ಉಗ್ರಹೋರಾಟ ನಡೆಸಲು ಕರೆ ಇತ್ತರು.

ಗುಲ್ಬರ್ಗ ಸ್ಟೈಪೆಂಡರಿ ಪದವೀಧರರ ಬೇಡಿಕೆಗಳು

ಭಾರತದಲ್ಲಿ ನಿರುದ್ಯೋಗ ಒಂದು ಕಡೆ ಹೆಚ್ಚುತ್ತಿದ್ದರೆ ಕಾರ್ಮಿಕರ ಶೋಷಣೆ ಇನ್ನೊಂದೆಡೆ ಹೆಚ್ಚುತ್ತಿದೆ. ಸದ್ಯದ ಶಿಕ್ಷಣ ತುಂಬ ಅನುತ್ಪಾದನೀಯವಾಗಿದೆ. ಭಾರತದಲ್ಲಿ 15 ಮಿಲಿಯನ್ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ಕರ್ನಾಟಕದ ನಿರುದ್ಯೋಗಿ ಪದವೀಧರರಿಗೆ ಸರ್ಕಾರ 150 ರೂ. ಮಾಸಿಕ ವೇತನ ಕೊಡುತ್ತಿದೆ. ಆದರೆ ಅವರಿಂದ ತುಂಬಾ ಕೆಲಸ ತೆಗೆಯುತ್ತಿದೆ. ಈ ಸ್ಟೈಪೆಂಡರಿ ಪದವೀಧರರನ್ನು ಶೋಷಿಸಲಾಗುತ್ತಿದೆ. ಇದನ್ನು ನಿಲ್ಲಿಸಬೇಕು ಮತ್ತು ತಮ್ಮ ಹಲವಾರು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಗುಲ್ಬರ್ಗದ ಸ್ಟೈಪೆಂಡರಿ ಪದವೀಧರರ ಸಂಘ ಸರ್ಕಾರವನ್ನು ಒತ್ತಾಯಿಸಿದೆ.

●

ಗೋಲಿಬಾರಿಗೀಡಾದವರ ಕುಟುಂಬ ಪರಿಹಾರ ನಿಧಿ

ಇತ್ತೀಚೆಗೆ ಮಲಪ್ರಭಾ ನೀರಾವರಿ ಪ್ರದೇಶದ ರೈತರ ಚಳುವಳಿ ಮತ್ತು ರಾಜ್ಯದಾದ್ಯಂತ ಇದಕ್ಕೆ ಬೆಂಬಲವಾಗಿಯೂ, ಬೆಲೆಏರಿಕೆ ವಿರುದ್ಧವೂ ನಡೆದ ಚಳುವಳಿಯಲ್ಲಿ ಪೋಲೀಸ್ ಗೋಲಿಬಾರಿಗೀಡಾಗಿ ಮೃತಪಟ್ಟ ರೈತರ ಕುಟುಂಬಕ್ಕೆ ಸಹಾಯಮಾಡಲು ನಿಧಿಯನ್ನು ಸಂಗ್ರಹಿಸಲು ಪ್ರಾಂತ ರೈತಸಂಘದ ರಾಜ್ಯಮಂಡಳಿಯು ನಿರ್ಣಯಿಸಿದೆ. ಒಂದು ರೂಪಾಯಿ ಕೂಪನ್ನುಗಳನ್ನು ಮಾರುವುದರ ಮೂಲಕ, ಈ ನಿಧಿಸಂಗ್ರಹವನ್ನು ಆದಷ್ಟು ಜರೂರುಮಾಡಿ, ರಾಜ್ಯ ಸಮಿತಿ ಆಫೀಸಿಗೆ ಕಳುಹಿಸಬೇಕಾಗಿ ವಿನಂತಿ. ಹಾಗೆಯೇ ಕೂಪನ್ನು ದೊರೆಯದವರು ಬೆಂಗಳೂರಿನಲ್ಲಿರುವ ರಾಜ್ಯಸಮಿತಿ ಕಚೇರಿಯಿಂದ ಇವನ್ನು ಪಡೆಯಬಹುದು.

ಎಚ್. ಮುಗುಮಾಳಪ್ಪ, ಅಧ್ಯಕ್ಷ

ಪಿ. ರಾಮಚಂದ್ರರಾವ್, ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಪ್ರಾಂತ ರೈತಸಂಘ

ಪೋಲೀಸ್ ದೌರ್ಜನ್ಯ ಕೊನೆಗೊಳ್ಳಲಿ

(1ನೇ ಪುಟದಿಂದ)

ಕೊಡಗಿನಲ್ಲಿ ತೋಟಕಾರ್ಮಿಕರ ಹೋರಾಟ, ಬೆಳಗಾವಿಯಲ್ಲಿ ಇಂಡಾಲ್ ಮತ್ತು ಪವರ್‌ಲೂಮ್ ಕಾರ್ಮಿಕರ ಹೋರಾಟ, ದಾಂಡೇಲಿಯ ಕಾರ್ಮಿಕರ ಹೋರಾಟ, ಇತ್ತೀಚೆಗೆ ರಾಯಚೂರಿನಲ್ಲಿ ನಡೆದ ಲಾರಿ ಚಾಲಕ ಮತ್ತು ಕ್ಲೀನರುಗಳ ಹೋರಾಟ-ಈ ಎಲ್ಲಾ ಸಂದರ್ಭಗಳಲ್ಲೂ ಪೋಲೀಸರು ಮಧ್ಯಪ್ರವೇಶ ಮಾಡಿ ನೂರಾರು ಕಾರ್ಮಿಕರ ಬಂಧನ, ಸುಳ್ಳು ಕೇಸುಗಳ ದಾಖಲೆ, ನಿಷೇಧಾಜ್ಞೆಯ ಜಾರಿ, ಹಲವೆಡೆ ಲಾಠಿಚಾರ್ಜ್ ಮಾಡುವುದರ ಮೂಲಕ ಕಾರ್ಮಿಕರ ನ್ಯಾಯವಾದ ಸಂಘಟಿತ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದ್ದಾರೆ, ಮೂಲತಃ ಮಾಲೀಕರಿಗೆ ಪರವಾಗಿ ನಿಂತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿನ ಗುತ್ತೇದಾರಿ ಬಂಡವಾಳಗಾರ ಬಾಂಗೂರ ಕಂಪೆನಿಯ ಒಡೆತನದ ಸಂಸೆ ಟೀ ತೋಟದಲ್ಲಿ ಮುಷ್ಕರ ನಿರತ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ಅಮಾನುಷ ದಾಳಿ, ಮುಖಂಡರುಗಳೂ ಸೇರಿದಂತೆ ಹಲವರ ಬಂಧನ ಮತ್ತು ಜಾಮೀನಿನಲ್ಲೂ ಬಿಡುಗಡೆ ಮಾಡಲು ನಿರಾಕರಿಸಿ ಜೈಲಿನಲ್ಲಿರಿಸಿ ಚಿತ್ರಹಿಂಸೆಗೆ ಗುರಿ ಮಾಡಿರುವುದು ನೂರಾರು ಘಟನೆಗಳಲ್ಲಿ ಒಂದು ಉದಾಹರಣೆಯಷ್ಟೆ. ರಾಯಚೂರಿನಲ್ಲಿ ಲಾರಿ ಚಾಲಕ ಮತ್ತು ಕ್ಲೀನರುಗಳ ಹೋರಾಟದ ಸಂದರ್ಭ ನಡೆಸಿದ ಲಾಠಿಚಾರ್ಜ್ 250 ಮಂದಿಗಿಂತಲೂ ಹೆಚ್ಚಿಗೆ ಜನರ ಬಂಧನ, ಜಾಮೀನಿನಲ್ಲಿ ಬಿಡಲು ನಿರಾಕರಣೆ, ಮುಖಂಡರುಗಳನ್ನು ರಾಯಚೂರು ಬಿಟ್ಟು ಹೋಗದಂತೆಯೂ, ಕಾರ್ಮಿಕ ಸಂಘಟನೆಗಳಲ್ಲಿ ಭಾಗವಹಿಸಬಾರದೆಂತಲೂ ಆಜ್ಞೆ ಮಾಡಿರುವುದು ಇದು ಇನ್ನೊಂದು ಉದಾಹರಣೆ. ಕಾರ್ಮಿಕರಿಗೆ ಕಾನೂನು ರೀತಿಯಲ್ಲಿ ಸವಲತ್ತು ಕೊಡದ ಮಾಲೀಕರು ಕಾನೂನು ತಪ್ಪಿದ್ದಕ್ಕೆ ಅವರ ಮೇಲೆ ಕ್ರಮ ವಹಿಸುವ ಬದಲು ಕಾರ್ಮಿಕರ ಮುಖಂಡರುಗಳನ್ನೇ ಗಡೀಪಾರು ಮಾಡುವ, ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯನ್ನು ನಾಚಿಸುವ ಕ್ರಮವನ್ನು ನಮ್ಮ ಪೋಲೀಸ್ ಇಲಾಖೆ ಅನುಸರಿಸುತ್ತಿದೆ.

ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆಯ ಪರಿಣಾಮವಾಗಿ ಉಂಟಾಗಿರುವ ಬಿಕ್ಕಟ್ಟಿನ ಭಾರದಿಂದ ತತ್ತರಿಸುತ್ತಲಿರುವ ರೈತರು, ಬಂಡವಾಳಶಾಹಿ-ಭೂಮಾಲೀಕ ಶಕ್ತಿಗಳ ಶೋಷಣೆಯಿಂದ ಬಳಲಿ ಬೆಂಡಾಗಿರುವ ಹಳ್ಳಿಯ ಬಡವರು, ದಲಿತರು, ಬೆಲೆ ಏರಿಕೆ ಮತ್ತು ನಿರುದ್ಯೋಗ ಹಾಗೂ ಭ್ರಷ್ಟಾಚಾರಗಳಿಂದ ಯಾತನೆ ಪಡುತ್ತಿರುವ ಜನಕೋಟಿಯು ಪ್ರತಿಭಟನೆ ನಡೆಸುವಾಗ ಸರಕಾರವು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಬದಲಾಗಿ ಪೋಲೀಸ್ ಪಡೆಗಳನ್ನು ಛೂ ಬಿಟ್ಟು ಪ್ರತಿಭಟನೆಯನ್ನು ಅಡಗಿಸಲು ಯತ್ನಿಸುತ್ತಿದೆ.

ಹುಣಸೆಕೋಟೆ ಶೇಷಗಿರಿಯಪ್ಪನ ಕೊಲೆ ಮಾಡಿದ ಭೂಮಾಲೀಕರನ್ನು ಬಂಧಿಸಲು ಒತ್ತಾಯಿಸಿ ಜಾಥಾದಲ್ಲಿ ಬೆಂಗಳೂರಿಗೆ ಬಂದ ದಲಿತರ ಮೇಲೆ ಪೋಲೀಸರ ಹಲ್ಲೆ ಮತ್ತು ಹಲವಾರು ಮಂದಿಯ ಬಂಧನ, ಇತ್ತೀಚಿನ ರೈತ ಚಳುವಳಿ ಮತ್ತು ಬೆಲೆಏರಿಕೆ ವಿರುದ್ಧ ಚಳುವಳಿಗಳಲ್ಲಿ ನರಗುಂದದಿಂದ ಪ್ರಾರಂಭಗೊಂಡು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತನಕ ಪೋಲೀಸ್ ಗೋಲೀಬಾರಿನಲ್ಲಿ ಸುಮಾರು ಇಪ್ಪತ್ತೈದು ಮಂದಿ ಸತ್ತು ಹಲವಾರು ಮಂದಿ ಗಾಯಗೊಂಡದ್ದು, ಮಂಗಳೂರಿನಲ್ಲಿ ಬಸ್ ದರ ಏರಿಕೆ ವಿರುದ್ಧ ಶಾಂತಿಯುತ ಸತ್ಯಾಗ್ರಹ ನಡೆಸಿದ ನೂರಾರು ಮಂದಿಯನ್ನು ಬಂಧಿಸಿ ಕೇಸು ಹಾಕಿರುವುದು-ಹೀಗೆ ಹಲವಾರು.

ಪೋಲೀಸರು ಕಾನೂನು ಚೌಕಟ್ಟಿನೊಳಗೆ ಕೆಲಸ ಮಾಡಬೇಕೇ ಹೊರತು, ಮೇಲಧಿಕಾರಿ ಹೇಳಿದನೆಂದು ಕಾನೂನು ಚೌಕಟ್ಟನ್ನು ಮುರಿಯಲು ಹಕ್ಕಿಲ್ಲ. ಪೋಲೀಸ್ ಇಲಾಖೆಯಿರುವುದು ನ್ಯಾಯ ಪರಿಪಾಲನೆ ಮತ್ತು ಜನತೆಗೆ ರಕ್ಷಣೆ ಕೊಡುವುದಕ್ಕೇ ಹೊರತು ಜನತೆಯನ್ನು ಹಿಂಸಿಸಲು ಅಲ್ಲ.

ಪೋಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರವಂತೂ ಮನೆಮಾತಾಗಿದೆ. ಮೂವತ್ತು ಸಹಸ್ರ ರೂಪಾಯಿ ಲಂಚ ತೆತ್ತರೆ ಪೋಲೀಸ್ ಇನ್ಸ್‌ಪೆಕ್ಟರನ ಹುದ್ದೆ ದೊರೆಯುವುದೆಂದು ಜನತೆಗೆ ತಿಳಿದಿರುವಾಗ, ಅದೇ ಇಲಾಖೆಯ ಮೇಲೆ ವಿಶ್ವಾಸ ಬರುವುದು ಹೇಗೆ ಸಾಧ್ಯ? ನಮ್ಮನ್ನು ಆಡಳಿತ ಮಾಡಿಕೊಂಡು ಬಂದ ಸರಕಾರಗಳು ಲಂಚವನ್ನು ವ್ಯವಸ್ಥಿತವಾಗಿ ಸಂಘಟಿಸಲು ಆಸ್ಪದವೀಯುತ್ತಾ ಬಂದಿದೆ. ರಸ್ತೆಯ ಬದಿಯಲ್ಲಿಯ ಬಡಪಾಯಿ ವ್ಯಾಪಾರಿಯಿಂದ ಮಾಮೂಲು ಪಡೆಯುವುದರಿಂದ ಮೊದಲ್ಗೊಂಡು, ಕೊಲೆ, ದರೋಡೆ, ಮಾಡಿದವರಿಂದಲೂ ಲಂಚಪಡೆದು, ಕೇಸನ್ನು ಸಡಿಲ ಮಾಡುವುದು-ಎಲ್ಲರಿಗೂ ತಿಳಿದ ವಿಚಾರ; ಪೋಲೀಸರಿಗೆ ಸಮಸ್ಯೆಗಳಿವೆ. ಅವರ ಸಂಬಳ ತೀರಾ ಕಡಿಮೆ, ಆದರೆ, ಅವರು ಸಮಸ್ಯೆ ಪರಿಹಾರಕ್ಕೆ ಸಂಘಟಿತ ಹೋರಾಟ ನಡೆಸಬೇಕೇ ಹೊರತು ಜನತೆಯಿಂದ ಲಂಚ ತೆಗೆದುಕೊಳ್ಳುವುದಲ್ಲ. ಅವರ ಹೋರಾಟಕ್ಕೆ ನಮ್ಮ ಸಹಾನುಭೂತಿ, ಬೆಂಬಲ ಇದೆ. ಈ ಹಿಂದೆ ರಾಷ್ಟ್ರದಾದ್ಯಂತ ಅವರು ನಡೆಸಿದ ಹೋರಾಟಕ್ಕೆ ನಾವು ಸಂಪೂರ್ಣ ಬೆಂಬಲವಿತ್ತಿರುವೆವು. ಸ್ವತಂತ್ರ ಭಾರತದಲ್ಲಿ ಪೋಲೀಸರಿಗೆ ಸಂಘಟನೆಯ ಹಕ್ಕನ್ನು ಕೊಟ್ಟದ್ದು ಪಶ್ಚಿಮ ಬಂಗಾಳದಲ್ಲಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರ.

ಕಾಂಗ್ರೆಸ್ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಪೋಲೀಸರನ್ನು ಮಾಲೀಕರ-ಭೂಮಾಲೀಕರ ಪರವಾಗಿ ಉಪಯೋಗಿಸಿ, ಶ್ರಮಜೀವಿಗಳ ಹಾಗೂ ದಲಿತರ ಹೋರಾಟವನ್ನು ಹತ್ತಿಕ್ಕಲು ಉಪಯೋಗಿಸುತ್ತಿದೆ. ಆದರೆ ಪಶ್ಚಿಮ ಬಂಗಾಳ, ಕೇರಳಗಳಂತಲ್ಲಿ ಎಡ ಮತ್ತು ಎಡಪ್ರಜಾಪ್ರಭುತ್ವ ಸರಕಾರಗಳ ಆಡಳಿತವಿರುವಲ್ಲಿ ಪೋಲೀಸರು ಬಂಡವಾಳಶಾಹಿಗಳ ಮಾಲೀಕರ ಮತ್ತು ಭೂಮಾಲೀಕರ ಪರವಾಗಿ ಮಧ್ಯಪ್ರವೇಶ ಮಾಡುವುದನ್ನು ನಿಲ್ಲಿಸಲಾಗಿದೆ.

ಪೋಲೀಸ್ ಇಲಾಖೆಯನ್ನು ಉಪಯೋಗಿಸಿಕೊಂಡು ನಮ್ಮ ರಾಜ್ಯದ ಕಾಂಗ್ರೆಸ್ ಸರಕಾರವು ನಡೆಸುವ "ಪೋಲೀಸ್ ರಾಜ್" ವಿರುದ್ಧ ಜನತೆಯು ಎಚ್ಚೆತ್ತು ಪ್ರತಿಭಟಿಸಬೇಕಾಗಿದೆ. ರೈತರ ಮತ್ತು ಶ್ರಮಿಕವರ್ಗದ ರಕ್ತ ಹೀರಿ ಗುತ್ತೇದಾರಿ ಬಂಡವಾಳಗಾರ ಮತ್ತು ಭೂಮಾಲೀಕರನ್ನು ಬೆಳೆಸುವ ಕಾಂಗ್ರೆಸ್ ಸರಕಾರವು ನಡೆಸುವ ಪೋಲೀಸ್ ದೌರ್ಜನ್ಯವನ್ನು ವಿರೋಧಿಸಬೇಕಾಗಿದೆ. ಅನ್ನ ಕೇಳುವ ಜನತೆಗೆ ಲಾಠಿ, ಗುಂಡುಗಳನ್ನೀಯುವ ಸರಕಾರದ ಪೋಲೀಸ್ ನೀತಿಯನ್ನು ಪ್ರತಿಭಟಿಸಲು ಇದೇ ಆಗಸ್ಟ್ 25ರಿಂದ 31ರ ತನಕ ಕರ್ನಾಟಕ ರಾಜ್ಯದಾದ್ಯಂತ "ಪೋಲೀಸ್ ದೌರ್ಜನ್ಯ ವಿರೋಧಿ ಸಪ್ತಾಹ"ವನ್ನು ನಡೆಸಲು ರಾಜ್ಯಸಮಿತಿಯು ತೀರ್ಮಾನಿಸಿದೆ. ಆಗಸ್ಟ್ 31ರಂದು ರೈತ, ಕೃಷಿಕೂಲಿಗಾರ, ಕಾರ್ಮಿಕರು, ವಿದ್ಯಾರ್ಥಿ ಯುವಜನ ಮತ್ತು ಮಹಿಳೆಯರಿಂದ ಸೇರಿದ ಬೃಹತ್ ಮೆರವಣಿಗೆ, ಪೋಲೀಸ್ ಕಚೇರಿ ಎದುರು ಸತ್ಯಾಗ್ರಹ, ಬಹಿರಂಗ ಸಭೆಗಳು ರಾಜ್ಯದಾದ್ಯಂತ ನಡೆಯಲಿವೆ. ಜನತೆಯು ಹಕ್ಕುಗಳ ರಕ್ಷಣೆಗಾಗಿ ನಡೆಯಲಿರುವ ಈ ಹೋರಾಟವನ್ನು ಸರ್ವರೂ ಬೆಂಬಲಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ವಿನಂತಿಸುತ್ತದೆ.

●

....ಸಾರ್ವತ್ರಿಕ ಮುಷ್ಕರ ಹಲವೆಡೆ ಬಂದ್

(1ನೇ ಪುಟದಿಂದ)

ನಲ್ಲಿ ಚಿತ್ರಹಿಂಸೆ, ಸಾರಿಗೆ ಸಂಸ್ಥೆ ಕಾರ್ಮಿಕರ ಬಂಧನ-ಇತ್ಯಾದಿ ವರದಿಗಳು ದೊರೆತಿವೆ. ರಾಯಚೂರು, ಗುಲಬರ್ಗಾ, ಬಿಜಾಪುರ, ಧಾರವಾಡ, ಹುಬ್ಬಳ್ಳಿ, ಹರಿಹರ, ದಾವಣಗೆರೆ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಶಿಡ್ಲಘಟ್ಟ, ತುಮಕೂರು, ಭದ್ರಾವತಿ, ಮೈಸೂರು, ಕೊಡಗು, ದ. ಕ. ಜಿಲ್ಲೆ, ಶಿವಮೊಗ್ಗ, ಹೀಗೆ ಹಲವಾರೆಡೆ ಕಾರ್ಮಿಕರ ಬೃಹತ್ ಪ್ರದರ್ಶನ ಮತ್ತು ಬಹಿರಂಗ ಸಭೆಗಳ ವರದಿಗಳೂ ಬಂದಿವೆ. ಜಿಲ್ಲಾಧಿಕಾರಿಗಳಿಗೆ ಮತ್ತು ಉನ್ನತ ರೆವಿನ್ಯೂ ಅಧಿಕಾರಿಗಳಿಗೆ ಮನವಿ ಪತ್ರವನ್ನೂ ಬೇರೆಬೇರೆಡೆ ಕೊಡಲಾಗಿದೆ.

ಜಂಟಿ ಕ್ರಿಯಾಸಮಿತಿಯ ಪರವಾಗಿ ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ., ಎಚ್. ಎಮ್. ಎಸ್., ಬಿ. ಎಮ್. ಎಸ್. ಮತ್ತು ಇಂಟಕ್ (ಯು) ಪ್ರತಿನಿಧಿಗಳನ್ನೊಳಗೊಂಡ ನಿಯೋಗವೊಂದು ಮುಖ್ಯಮಂತ್ರಿಯವರು ಮತ್ತು ರಾಜ್ಯಪಾಲರನ್ನು ಭೇಟಿಯಾಗಿ ಅಗತ್ಯಸೇವಾ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದೂ, ಪೋಲೀಸ್ ದೌರ್ಜನ್ಯವನ್ನು ನಿಲ್ಲಿಸಬೇಕೆಂಬ ಬೇಡಿಕೆಗಳುಳ್ಳ ಮನವಿಯನ್ನು ಸಲ್ಲಿಸಿದೆ. ಸರಕಾರವು ಎಚ್ಚೆತ್ತು ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಕಾರ್ಮಿಕವರ್ಗದ ಐಕ್ಯಹೋರಾಟವು ತೀವ್ರಗೊಳ್ಳುವುದೆಂದೂ ಜಂಟಿ ಕ್ರಿಯಾಸಮಿತಿಯ ಮುಂದಾಳುಗಳು ಎಚ್ಚರಿಸಿರುವರು. ರಾಜ್ಯದ ಕಾರ್ಮಿಕ ವರ್ಗವನ್ನು, ಹಾಗೆಯೇ ಸಂಪೂರ್ಣ ಬೆಂಬಲವಿತ್ತ ಜನತೆಯನ್ನು ಇವರೆಲ್ಲರೂ ಅಭಿನಂದಿಸಿರುವರು.

o

ಮಿನರ್ವ ಮಿಲ್ಸ್ ಕಾರ್ಮಿಕರ ಮೇಲೆ ಪೋಲೀಸರ ಅಮಾನುಷ ಹಲ್ಲೆ

ಕಾರ್ಮಿಕರ ಜಂಟಿ ಕ್ರಿಯಾ ಸಮಿತಿಯ ಕರೆಯ ಮೇರೆಗೆ 18-8-80ರಂದು ಕರ್ನಾಟಕದಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಯಿತಷ್ಟೇ. ಅಂದು ಬೆಂಗಳೂರಿನ ಪೋಲೀಸರು ಸಮಾಜಘಾತುಕ ಶಕ್ತಿಗಳೆಂದು ಹೆಸರಿಸಿ ನಿರಪರಾಧಿ ಜನತೆ ಮತ್ತು ಕಾರ್ಮಿಕರನ್ನು ಬಂಧಿಸಿದ್ದವರಲ್ಲಿ ಮಿನರ್ವ ಮಿಲ್ಲಿನ ಬಡಪಾಯಿ, ನತದೃಷ್ಟ ಕಾರ್ಮಿಕರಾದ ರಾಮಕೃಷ್ಣ, ಚೆಲುವರಾಜು ಎಂಬಿಬ್ಬರು.

ಈ ಕಾರ್ಮಿಕರು ಅಂದು ಕೆಲಸಕ್ಕೆ ಹೋಗಲು ಮಿಲ್ಲಿನ ಗೇಟಿನ ಮುಂದೆ ನಿಂತಿರುವಾಗ ಹಠಾತ್ತಾಗಿ ಕಾಣಿಸಿಕೊಂಡ ಪೋಲೀಸರು ಅವಾಚ್ಯ ಶಬ್ದಗಳಿಂದ ಬೈದು ಕತ್ತಿನಪಟ್ಟಿಯನ್ನು ಹಿಡಿದುಕೊಂಡರು. ಈ ಅನ್ಯಾಯವನ್ನು ಪ್ರತಿಭಟಿಸಿದ ಅವರನ್ನು ಸ್ಥಳದಲ್ಲಿಯೇ ಸಾರ್ವಜನಿಕರೆದುರು ಎದೆ, ಮುಖ, ಮೂತಿ ನೋಡದೆ ಈ ನಿರ್ಧಯಿ, ಮಾನವೀಯತೆಯ ವಾಸನೆಯನ್ನೂ ಕಾಣದ ಪೋಲೀಸರು ಬೂಟುಗಾಲಿನಿಂದ ತುಳಿದುಹಾಕಿ ನಾಯಿಗಳನ್ನು ಎಳೆದೊಯ್ಯುವಂತೆ ಎಳೆದೊಯ್ದರು.

19-8-80ರಂದು ಬಿಡುಗಡೆಯಾದ ಈ ಕಾರ್ಮಿಕರನ್ನು ಗುರುತಿಸುವುದು ಕಷ್ಟವಾಯಿತು. ಮೈ ಮುಖವೆಲ್ಲಾ ಊದಿಕೊಂಡು ಹಸಿರುಗಟ್ಟಿದ್ದವು. ಅಲ್ಲಲ್ಲೇ ರಕ್ತದ ಕಲೆಗಟ್ಟಿ ಕಪ್ಪಾಗಿದ್ದಿತು. ಈ ನೊಂದ ಕಾರ್ಮಿಕರು ಸುಧಾರಿಸಿಕೊಳ್ಳಲು ಆರು ತಿಂಗಳುಗಳಾದರೂ ಬೇಕಾಗುವುದು.

ಈ ಪೋಲೀಸ್ ದೌರ್ಜನ್ಯವನ್ನು ವಿರೋಧಿಸಲು, ಮಿನರ್ವ ಮಿಲ್ಸ್‌ನ ಕಾರ್ಮಿಕರು 21-8-80ರಂದು ಮೆರವಣಿಗೆ ತೆಗೆದು ಪೋಲೀಸ್ ಕಮೀಷನರ್‌ರವರಿಗೆ ಮನವಿಯನ್ನು ಕೊಡಲು ಮುಂದಾದರು. ಮಿಲ್ಸ್‌ನ ಗೇಟಿನ ಹೊರಗೆ ಬರಲು ಬಿಡದೆ ಪೋಲೀಸರು ತಡೆದು ಭಾರಿ ಲಾಠಿ ಪ್ರಹಾರಮಾಡಿ ಹಲವು ಕಾರ್ಮಿಕರ ತಲೆಯೊಡೆದು ಕಾರ್ಮಿಕ ನಾಯಕರಾದ ಕಾಂ. ವಿ. ಪಿ. ಕುಲಕರ್ಣಿ, ಎ. ಐ. ಟಿ. ಯು. ಸಿ. ಯ ಕಾಂ. ರತ್ನಂ, ರೈತನಾಯಕರಾದ ಕಾಂ. ವೆಂಕಟೇಶ್, ನರಸಿಂಹನ್ ಇತ್ತಿತರರನ್ನು ಸ್ಥಳದಲ್ಲಿಯೇ ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಲಾಠಿಪ್ರಹಾರವನ್ನು ಮಾಡುವಾಗಲೇ ಕೆಲವು ಅನಕ್ಷರಸ್ಥ ಪೋಲೀಸರು ಕೆಂಪು ಬಾವುಟದ ಮಹತ್ವವನ್ನು ಅರಿಯದೆ ಹರಿದು ಚಿಂದಿ ಮಾಡಿ ಬೂಟುಗಾಲಿನಿಂದ ತುಳಿದರು. ಮತ್ತೆ ಕೆಲವು ಪೋಲೀಸರು ತಮ್ಮ ಕೈಯಲ್ಲಿ ಬಂದೂಕವಿದ್ದರೆ, ಬಾಂಬಿದ್ದರೆ ಈ ಕಾರ್ಮಿಕ ಕುನ್ನಿಗಳನ್ನು ಸದೆಬಡಿಯಬಹುದಿತ್ತು ಎಂದು ಅಟ್ಟಹಾಸದಿಂದ ಮೆರೆಯುತ್ತಿದ್ದ ದೃಶ್ಯ ಮಾನವೀಯತೆಯು ತಲೆತಗ್ಗಿಸುವಂತಿತ್ತು.

ನಂತರ ಗೇಟಿನಲ್ಲಿ ಸಭೆಕರೆದು ಕಾಂ. ವಿ. ಪಿ. ಕುಲಕರ್ಣಿ, ಹರಿಗೋವಿಂದ್, ವೆಂಕಟೇಶ್ ಮತ್ತಿತರರು ಈ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು.

o

ಐಕ್ಯರಂಗ

ಓದಿ

ಇನ್ನಿಬ್ಬರನ್ನು ಓದಿಸಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT